ಅಧ್ಯಕ್ಷರ ಅಪ್ಪಣೆ ಮೇರೆಗೆ ನಡೆದ ಚರ್ಚೆ

9. ಆಲಮಟ್ಟಿ ಡ್ಯಾಂನ್ನು ಎತ್ತರಿಸಬೇಕೋ, ಬೇಡವೋ ಎನ್ನುವ ಬಗ್ಗೆ ಸಮಿತಿಯ ರಚನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಇದೇನು ಪದೇ ಪದೇ ಹೇಳುತ್ತಿದ್ದಾರೆಂದು ತಮಗೂ ಕೂಡ ಬೇಸರವಾಗಬಹುದು.

ಅಧ್ಯಕ್ಷರು : ಇಲ್ಲ, ನಮಗೆ ಬೇಸರವಿಲ್ಲ.

+ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಸದನ ಬಹಳ ಸುಲಲಿತವಾಗಿ ನಡೆಯುತ್ತಿರುವಾಗ ಇದೇನಪ್ಪ ಮತ್ತೆ ಈ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದಾರೆಂದು ತಮಗೆ ಆಗಬಹುದು. ಆದರೆ ಇದೊಂದು ವಿಚಿತ್ರವಾದಂತಹ ಸಿಚ್ಯುಯೇಷನ್ ಅರೈಸ್ ಆಗಿದೆ. ಈಗ ತಾನೆ ನಾವು ಪತ್ರಿಕೆಯಲ್ಲಿ ಓದಿದ್ದು, ಕೇಳಿದ್ದು ಮತ್ತು ಇಲ್ಲಿ ಪ್ರಸ್ತಾಪ ಮಾಡಿದಾಗ, ನಾಲ್ಕು ರಾಜ್ಯಗಳ ಮುಖ್ಯಮಂತ್ರಿಗಳು ಈ ಆಲಮಟ್ಟಿ ಡ್ಯಾಮನ್ನು ಎತ್ತರಿಸಬೇಕೋ ಬೇಡವೋ ಎನ್ನತಕ್ಕ ವಿಷಯದ ಬಗ್ಗೆ ತೀರ್ಮಾನವನ್ನು ತೆಗೆದುಕೊಳ್ಳಬೇಕೆಂದು ಹೇಳಿರುವುದು ಇದೆ. ಯುನೈಟೆಡ್ ಫ್ರಂಟ್ ಪಾರ್ಟೀಸ್ ಎಂದು ಹೇಳಲೋ, ಗೌರ್ನಮೆಂಟ್ ಎಂದು ಹೇಳಲೋ, ಗೌರ್ನಮೆಂಟ್ ಅಂದರೆ ಪ್ರೈಮಿನಿಸ್ಟರ್ ಆಫೀಸಿನಿಂದ ಮೀಟಿಂಗ್ ಆಗಿ, ಪ್ರೊಸೀಡಿಂಗ್ ಆಗಿ ಆಫಿಷಿಯಲ್ ಕಮಿಟಿ ಕಾನ್ಸಿಟ್ಯೂಟ್ ಮಾಡುವುದಕ್ಕೆ ಆಗಿದೆ. ಅದು ಆಫಿಷಿಯಲ್ ಕಮಿಟಿ ಎಂದು ಹೇಳಬಹುದು. ಈವೊಂತು ಬಚಾವತ್ ಅವಾರ್ಡ್ ಮೇಲೆ ರಿವ್ಯೂ ಮಾಡತಕ್ಕದ್ದು ಆಗಲಿ, ಅಮೆಂಡ್‌ಮೆಂಟ್ ಮಾಡತಕ್ಕದ್ದು ಆಗಲಿ, ಅದರೊಳಗೆ ಕೈಯಾಡಿಸತಕ್ಕದ್ದು ಆಗಲಿ ಮಾಡತಕ್ಕ ಅಧಿಕಾರ, ಹಕ್ಕು ಆ ಮುಖ್ಯಮಂತ್ರಿಗಳಿಗೆ ಇಲ್ಲ. ಯುನೈಟೆಡ್‌ಫ್ರಂಟ್ ಪಾರ್ಟೀಸ್‌ಗೂ ಕೂಡ ಇಲ್ಲ. ಸರ್ಕಾರ ಏನಾದರೂ ಎಲ್ಲರನ್ನೂ ಕರೆಸಿ ಇದನ್ನು ಫ್ಯಾಕ್ಟ್ ಫೈಂಡಿಂಗ್ ಕಮಿಟಿ ಎಂದು ಮಾಡಿದ್ದರೆ ಅದೊಂದು ತರಹ ಇತ್ತು. ಆದರೆ ಆ ನಾಲ್ಕು ಮಂದಿ ಸಮಿತಿಯನ್ನು ಒಂದು ಕಡೆ ಮಾಡಿ, ಇವತ್ತಿನ ದಿವಸ ಆ ಸಮಿತಿಯವರು ಏನು ಮಾಡಿದ್ದರೆಂದರೆ ಲೇಟೆಸ್ಟ್ ನ್ಯೂಸ್ 9 ಜನರ ಕಮಿಟಿಯನ್ನು ಕಾನ್ಸಿಟ್ಯೂಟ್ ಮಾಡಿದ್ದರೆ. ತಮ್ಮ ಗಮನಕ್ಕೆ ಇಷ್ಟು ತರುತ್ತೇನೆ ಆ 9 ಜನರ ಕಮಿಟಿಯಲ್ಲಿ ಸೆಂಟ್ರಲ್ ವಾಟರ್ ಕಮಿಷನ್‌ರವರು ಇದ್ದಾರೆ. ಪ್ಲಾನಿಂಗ್ ಕಮಿಷನ್‌ರವರು ಆಮೇಲೆ ಎಕ್ಸ್‌ಪರ್ಟ್ ಇಂಜಿನಿಯರ್ಸ್ ಇದ್ದಾರೆಂದರೆ ಇದು ಏನಾಯಿತು? ಯಾವ ಅಥಾರಿಟಿಯ ಮೇಲೆ ಪ್ಲಾನಿಂಗ್ ಕಮಿಷನ್ ಮೆಂಬರ್ಸ್ ಮತ್ತು ನಮ್ಮ ಸೆಂಟ್ರಲ್ ವಾಟರ್ ಕಮಿಷನ್‌ನ ಮೆಂಬರ್ಸ್ ಅಥವಾ ಇಂಜಿನಿಯರ್ಸ್ ಇದರಲ್ಲಿ ಭಾಗಿಯಾಗುತ್ತಾರೆ? Which is the authority which has given powers to constitute this expert committee ಇದರಿಂದ ನಮ್ಮ ರಾಜ್ಯಕ್ಕೆ ಬಹಳ ದೊಡ್ಡ ಪೆಟ್ಟು ಆಗತಕ್ಕ, ಪೆಟ್ಟು ಬೀಳತಕ್ಕ ಸಾಧ್ಯತೆ ಇದೆ. ಇದನ್ನು ಓದಿ ತಮ್ಮ ಗಮನಕ್ಕೆ ತರುತ್ತೇನೆ.

The parel of Chief Ministers constituted to adjudicate the dispute between Andhra Pradesh and Karnataka over the controversial Alamatti Dam issue to-day decided to constitute nine member committee of engineering experts in an effort to address to the main stumbling block to a solution - which of the two States has violated the provisions of the Bachawat Tribunal Award.

Official sources said the proposal to constitute the Experts Team was meeted by West Bengal Chief Minister Jyothi Basu since the contended parties, Andhra Chief Minister N. Chandra Babu Maidu and Karnataka Chief Minister J.H. Patel stuck to their respective positions at the meeting of the panel held at the Prime Minister's residence this morning.

Chief Minister Mr. M. Karunanidhi, Laloo Prasad Yadav (Bihar) and Prafulla Kumar Mohanta (Assam) were present at the meeting."

"...Both Mr. Naidu and Mr. Patel alleged that it was the other State which violated the Tribunal Award. Mr. Basu announced seting up of the Team since the issue involved was technical in nature and that both the Chief Ministers were in no mood to relent. An official sources said, the team drawn from Wesr Bengal, Tamilnadu, Bihar, Assam, planning Commission and the Central Water Commisssion will be at the Dam site latest by August, 14h and Report to the Chief Ministers' panel within a week. The Chief Ministers' Panel in turn will submit a report to the United Front's Steering Committee.

ಅಧ್ಯಕ್ಷರು : ಇದರಲ್ಲಿ ಎರಡು ವಿಚಾರ ಇವೆ. ಒಂದು the Karnataka Chief Minister stuck to his stand. There is no change in his stand. ಅವರು ನಿನ್ನೆ ಹೇಳಿರುವುದು, ಇವತ್ತು ಪತ್ರಿಕೆಯಲ್ಲಿ ಬಂದಿರುವುದು. ಅದರಿಂದ ಅಲ್ಲಿ ಏನೂ ಇತ್ಯರ್ಥ ಆಗಲಿಲ್ಲ ಎನ್ನತಕ್ಕಂಥಾದ್ದು. ಎರಡನೆಯದು ಇದು. ನೈನ್ ಮೆಂಬರ್ಸ್ ಕಮಿಟಿನೋ ನೈನ್ಟೀನ್ ಮೆಂಬರ್ಸ್ ಕಮಿಟೀನೋ ಇದಕ್ಕೆ ಕರ್ನಾಟಕ ಚೀಫ್ ಮಿನಿಸ್ಟರ್ ಒಪ್ಪಿಕೊಂಡರು ಎಂದು ಏನೂ ಇಲ್ಲ. Why should we bother about it?

SRI M. MALLIKARJUNA KHARGE : Sir, you should not forget that this meeting has taken place in the residence of the prime Minister and Mr. Jyoti Basu, The Chief Minsiter of west Bangal and one of the Front Leaders suggested for this. Suppose that meeting has taken plasce in Janatha Dal Office, I would not have mind it. However, the discussion took plase at the residence of the prime minister and out of that discussion, they constituted this Nine Member Technically Expert Committee. I want to know ಇದಕ್ಕೆ ಯಾರು ಹಣ ಕೊಡುವವರು? ಇವತ್ತು ಅವರು ಬಂದು 14ನೇ ತಾರೀಖಿನೊಳಗೆ ಎಕ್ಸ್‌ಪರ್ಟ್ಸ್ ಕಮಿಟಿ ಎಕ್ಸಾಮಿನ್ ಮಾಡತಕ್ಕದ್ದು, ಯಾವ ಕಾನೂನು ಅಡಿಯಲ್ಲಿ ಅವರು ಬರುತ್ತಾರೆ? ಯಾವ ಅಥಾರಿಟಿಯಾಗಿ ಬರುತ್ತಾರೆ? ಸಂವಿಧಾನದಲ್ಲಿ ಅದಕ್ಕೆ ಏನಾದರೂ ಪ್ರಾವಿಜನ್ ಇದೆಯೇ? Who is going to finance for it?

ಅಧ್ಯಕ್ಷರು : ಈಗ ಮುಖ್ಯ ಮಂತ್ರಿಗಳು ಈ ನೈನ್ ಮೆಂಬರ್ಸ್ ಕಮಿಟಿ ಮಾಡುವುದಕ್ಕೆ ಒಪ್ಪಿಕೊಂಡಿದ್ದಾರೆ ಅಥವಾ ಇಲ್ಲ ಎನ್ನುವುದರ ಬಗ್ಗೆ ಏನಾದರೂ ಅದರಲ್ಲಿ ಇದೆಯಾ?

SRI M. MALLIKARJUNA KHARGE : Who is going to finance for that Committee?

ಅಧ್ಯಕ್ಷರು : ಒಳ್ಳೆ ಕತೆಯಾಯಿತಲ್ಲ, ನಾನು ಏನು ರಿಕ್ವೆಸ್ಟ್ ಮಾಡುತ್ತಿದ್ದೇನೆ ಎಂದರೆ, ಮುಖ್ಯಮಂತ್ರಿಗಳು ನಾಳೆ ಬೆಳಿಗ್ಗೆ ಇಲ್ಲಿಗೆ ಬರುತ್ತಾರೆ, ಅವರು ಸ್ಟೇಟ್‌ಮೆಂಟ್ ಮಾಡುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇಲ್ಲ ಇದು ಲೇಟೆಸ್ಟ್ ಅಲ್ಲವೆ ಸಾರ್?

ಅಧ್ಯಕ್ಷರು : ಅವರೇ ನಾಳೆ ಸ್ವತಃ ಇಲ್ಲಿಗೆ ಬರುತ್ತಾರೆ. ಅವರು ಒಂದು ಸ್ಟೇಟ್ ಮೆಂಟ್ ಮಾಡುತ್ತಾರೆ. ಈಗ ಏಕೆ ನಮ್ಮ ಸಮಯ ಹಾಳು ಮಾಡಿಕೊಳ್ಳಬೇಕು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸರ್, ಸಮಯ ಹಾಳು ಅಲ್ಲ. ಇದು ಪ್ರಧಾನ ಮಂತ್ರಿಗಳನ್ನು ಇಕ್ಕಟ್ಟಿಗೆ ಸಿಕ್ಕಿಸತಕ್ಕದ್ದು ಒಂದು ಕಡೆಗೆ ಇದ್ದರೆ, ಇನ್ನೊಂದು ಕಡೆ ಆ ಒಂದು ನಾಲ್ಕು ಮುಖ್ಯಮಂತ್ರಿಗಳು ಪ್ರೆಸರೈಸ್ ಮಾಡಿ.

ಅಧ್ಯಕ್ಷರು : ಪ್ರೈಮ್ ಮಿನಿಸ್ಟರ್‌ಗೆ ಇಕ್ಕಟ್ಟು ಇದೆಯೇ? ಇಲ್ಲವೋ, ಬೇರೆ ಯಾರಾದರೂ ಇರಬಹುದು. ನನಗಂತೂ ಈ ಕೃಷ್ಣಾ - ಕಾವೇರಿಯಲ್ಲಿ ಇಕ್ಕಟ್ಟು ಇಲ್ಲ.

SRI M. MALLIKARJUNA KHARGE : Sir, when four Chief Ministers of United Front are pressurising him, naturally the Prime Minister has to yield. ಒಂದು ಪಾಯಿಂಟ್‌ಗೆ ಇಲ್ಲ ಅಂದರೆ ಒಂದು ಪಾಯಿಂಟ್‌ಗಾದರೂ ಬರಬೇಕಾಗುತ್ತದೆ.

ಶ್ರೀ ಸಿದ್ಧರಾಮಯ್ಯ : ಖರ್ಗೆಯವರೇ....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರೂ ಕೂಡ ಒಬ್ಬ ಸೀನಿಯರ್ ಚೀಫ್ ಮಿನಿಸ್ಟರ್. ಅವರು ಸುಮ್ಮನೆ ಏನೋ ಹೇಳಿದ್ದಾರೆ ಎಂದು ಇಲ್ಲ. ಅವರು ಸಜೆಸ್ಟ್ ಮಾಡಿದ್ದಾರೆ ಎಕ್ಸಪರ್ಟ್ ಕಮಿಟಿ ಮಾಡಬೇಕು, ನಮಗೇನೂ ಅದರೊಳಗೆ ಗೊತ್ತಿಲ್ಲ, ಏಕೆಂದರೆ ಇದರಲ್ಲಿ ಟೆಕ್ನಿಕಲ್ ಮ್ಯಾಟರ್ ಇರುವುದರಿಂದ... he said that they have to go in depth. Therefore, he suggested Engineers, Central Water Commission Members and then so many other persons in the Committee.

ಅಂದಾಗ ಸಜೆಸ್ಟ್ ಮಾಡತಕ್ಕಂಥ ಅಥಾರಿಟಿ ಹೇಗೆ ಬಂತು? ಅಮೇಲೆ ಅಲ್ಲಿ ಸ್ಟೀರಿಂಗ್ ಕಮಿಟಿಗೆ ಈ ಪ್ಯಾನಲ್ ಆಫ್ ಎಕ್ಸಪರ್ಟ್ಸ್ ರಿಪೋರ್ಟ್ ಕೊಡಬೇಕಂತೆ. ಅಂದರೆ ಸರ್ಕಾರದ ಖರ್ಚಿನಲ್ಲಿ ಬಂದು, ಸರ್ಕಾರದ ವತಿಯಿಂದ ಬಂದು ಅವರು ಒಂದು ಪಕ್ಷದ ಸ್ಟೀರಿಂಗ್ ಕಮಿಟಿಗೆ ಕೊಡಬೇಕೇ ಹೇಗೆ? ನಮ್ಮ ಮುಂದೆ ಇದು ಗಂಭೀರವಾದ ವಿಷಯ ಇದೆ. ಮತ್ತು ಇದರಿಂದ ಏನಾಗುತ್ತದೆ ಎಂದರೆ, ಈ ನಾಲ್ಕು ಮುಖ್ಯಮಂತ್ರಿಗಳು ನಾಳೆ ಏನಾದರೂ ಒಂದು ತೀರ್ಮಾನ ತೆಗೆದುಕೊಂಡು, ಅವರದ್ದೇ ಆದಂಥ ಒಂದು ನಿಲುವು ಇಟ್ಟುಕೊಂಡು ಪ್ರೈಮ್ ಮಿನಿಸ್ಟರ್ ಮೇಲೆ ಪ್ರೆಶರೈಸ್ ಮಾಡಿದಾಗ, ಖಂಡಿತವಾಗಿಯೂ ನಮ್ಮ ಬಚಾವತ್ ಅವಾರ್ಡ್‌ಗೆ ಸಂವಿಧಾನಾತ್ಮಕವಾಗಿ ವ್ಯಾಲಿಡ್ ಏನಿದೆ, ಕಾನೂನು ಬದ್ಧವಾಗಿ ಏನಿದೆ, ಅದಕ್ಕೆ ಇವತ್ತು ಕೊಡಲಿ ಪೆಟ್ಟನ್ನು ಹಾಕತಕ್ಕಂಥ ಪ್ರಯತ್ನ ಇದರಿಂದ ಆಗುತ್ತದೆ. ದಯವಿಟ್ಟು ಚರ್ಚೆಗೆ ಅವಕಾಶ ಮಾಡಿಕೊಡಬೇಕು. ಏಕೆಂದರೆ. whether this Jyoti Basu has got the power to say like this? Whether this Steering Committee has got any locus standi?

MR. SPEAKER : What do we discuss? Even it I allowed, what do we discuss.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಡಿಸ್‌ಕಸ್ ಅಂದರೆ ಈಗ ಎಕ್ಸಟ್ರಾ ಕಾನ್ಸಿಟ್ಯೂಶನಲ್ ಅಥಾರಿಟಿಗೆ ಪವರ್ಸ್ ಇದೆಯೇನು? ಅಥವಾ ಒಂದು ಪೊಲಿಟಿಕಲ್ ಪಾರ್ಟಿ ಇಂತಹ ಇಂಟರ್‌ಸ್ಟೇಟ್ ವಾಟರ್ ಡಿಸ್‌ಪ್ಯೂಟ್‌ನ್ನು ಪಕ್ಷದಲ್ಲಿ ತೆಗೆದುಕೊಂಡು ಎಕ್ಸಪರ್ಟ್ಸ್ ಕಮಿಟಿ ಮಾಡುತ್ತೇವೆ ಎಂದು ಹೇಳಿ ಸರ್ಕಾರದ ಅಧಿಕಾರಿಗಳನ್ನು ಡ್ರಾ ಮಾಡಬಹುದೇನು? ನಾನು ಒಪ್ಪಿಕೊಳ್ಳುತ್ತೇನೆ. ನಿಮ್ಮ ಪಾರ್ಟಿ ಒಂದಿದ್ದು ನಿಮ್ಮ ಪಾರ್ಟಿಯಲ್ಲೇ ಒಂದು ನಿರ್ಣಯ ತೆಗೆದುಕೊಂಡು, ನಿಮ್ಮ ಪಾರ್ಟಿಯ ರಿಟೈರ್ಡ ಇಂಜಿನಿಯರ್ಸ್ ಅಥವಾ ನಿಮಗೆ ಬೇಕಾದ ಎಕ್ಸಪರ್ಟ್ಸ್‌ನ್ನು ಹಾಕಿಕೊಂಡು ನೀವು ನಿಮ್ಮದೇ ಆದಂಥ ಒಂದು ರಿಪೋರ್ಟನ್ನು ತೆಗೆದುಕೊಂಡು ನಿಮ್ಮ ಪೊಲಿಟಿಕಲ್ ಪಾರ್ಟಿಯ ಹೈಕಮಾಂಡ್ ಮುಂದೆ ಇಟ್ಟರೆ ಅದು ಬೇರೆ ವಿಷಯ. ಆದರೆ ಇಲ್ಲಿ ವಿಷಯ ಇರತಕ್ಕಂಥಾದ್ದು ಏನೆಂದರೆ ನಾಲ್ಕು ಮುಖ್ಯಮಂತ್ರಿಗಳು ಇರುವ ಪ್ಯಾನಲ್ ಎಕ್ಸಪರ್ಟ್ಸ್ ಕಮಿಟಿಗೆ ಒಂಭತ್ತು ಎಕ್ಸಪರ್ಟ್ಸ್‌ನ್ನು ನಾಮಿನೇಟ್‌ಮಾಡಿ ಅದರೊಳಗೆ ಇಂಜಿನಿಯರ್ಸ್ ಸೆಂಟ್ರಲ್ ವಾಟರ್ ಕಮಿಷನ್ ಬೋರ್ಡ್ ಮೆಂಬರ್ಸ್, ಪ್ಲಾನಿಂಗ್ ಕಮೀಷನ್ ಮೆಂಬರ್ಸ್, ಇಂಜಿನಿಯರ್ಸ್ ಇವರೆಲ್ಲರನ್ನೂ ಸೇರಿಸಿ ಮಾಡಬೇಕು. ಅವರು ಸ್ಟೇರಿಂಗ್‌ಕಮಿಟಿ ಮುಂದೆ, ಈ ನಾಲ್ಕು ಮಂದಿ ಮುಖ್ಯಮಂತ್ರಿಗಳಿಗೆ ಒಂದು ರಿಪೋರ್ಟ್ ಕೊಡಬೇಕು ಎನ್ನತಕ್ಕಂಥಾದ್ದು ಇದೆಯಲ್ಲ, ಇದರ ಬಗ್ಗೆ ಅವರಿಗೆ ಎಷ್ಟರಮಟ್ಟಿಗೆ ಸಂವಿಧಾನದಲ್ಲಿ ಹಕ್ಕು ಇದೆ? ಏಕೆ ಈ ಪ್ರಯತ್ನವನ್ನು ಅವರು ಮಾಡುತ್ತಿದ್ದಾರೆ? ಮತ್ತು ಪ್ರಯತ್ನದಿಂದ ಈ ನಿಲುವಿನಿಂದ ಅಥವಾ ಈ ಸ್ಟ್ಯಾಂಡ್‌ನಿಂದ ನಮ್ಮ ರಾಜ್ಯಕ್ಕೆ ಹಾನಿಯಾಗುತ್ತದೆ. ಇವತ್ತು ನಾನು ಆಗಲೇ ಹೇಳಿದೆ.

ಮಾನ್ಯ ಮುಖ್ಯಮಂತ್ರಿಗಳು ಏನು ಸ್ಟ್ಯಾಂಡ್ ತೆಗೆದುಕೊಂಡಿದ್ದರು, ನಾನು ಮೊನ್ನೆ ಮೂರನೆಯ ತಾರೀಖಿಗೆ ಬರುವವರೆಗೆ ಮತ್ತು ಕೊನೆಗೆ ಸ್ಟಿಕ್‌ಆನ್ ಆಗಿದ್ದಾರೆ ಎಂದು ಹೇಳುತ್ತಿದ್ದಾರಲ್ಲ, ಸರಿ. ಆದರೆ ಇವತ್ತು ಅವರ ಎದುರುಗಡೆಯೇ ಪ್ರೈಮ್ ಮಿನಿಸ್ಟರ್ ಅವರ ಮನೆಯಲ್ಲಿ, ನೀವು ಹೋಗಿ ನೋಡಿ. ಅವರ ಮನೆಯಲ್ಲಿ ಇವರ ಕಡೆಯವರು ಇಲ್ಲಿ ಉಳಿದರು ಅವರ ಕಡೆಯವರು ಅಲ್ಲಿ ಉಳಿದರು. ಕೊನೆಗೆ ಜ್ಯೋತಿ ಬಸು ಅವರು ಸಜೆಸ್ಟ್ ಮಾಡಿ ಒಂಭತ್ತು ಜನರ ಕಮಿಟಿ ಮಾಡಿದಾಗ, ಇದಕ್ಕೆ ಪ್ರತ್ಯಕ್ಷವಾಗಿ ಮಾನ್ಯ ನಾಯ್ಡುರವರು ಮತ್ತು ಜೆ.ಎಚ್. ಪಟೇಲರು ಇಬ್ಬರೂ ಕೂಡ ಒಪ್ಪಿದ್ದಾರೆ ಎನ್ನುವಂಥ ಅರ್ಥ ಇದರಿಂದ ಹೊರಡುತ್ತದೆ. ಇಲ್ಲದಿದ್ದರೆ ಅವರು ಸ್ಪಷ್ಟವಾಗಿ ಹೇಳಬಹುದಾಗಿತ್ತು. ವಾಕ್‌ಔಟ್ ಮಾಡಬಹುದಾಗಿತ್ತು, ನಾನು ಇದಕ್ಕೆ ಒಪ್ಪುವುದಿಲ್ಲ, ನನಗೆ ಸಂಬಂಧ ಇಲ್ಲ, ಏನಾದರೂ ಆದರೆ ಅದು ಕೋರ್ಟಿನಲ್ಲಿ, ಆಗಲಿ, ಬೇಕಾದರೆ ಪ್ರಧಾನಮಂತ್ರಿಗಳು ಅಫಿಶಿಯಲ್ ಮೀಟಿಂಗ್ ಕರೆದು ಅಲ್ಲಿ ಏನಾದರೂ ಮಾಡಿದರೆ, ಅಲ್ಲಿ ಏನು ಉತ್ತರ ಕೊಡಬೇಕು ಅದನ್ನು ಕೊಡುತ್ತೇವೆ ಎನ್ನತಕ್ಕಂಥ ಮಾತನ್ನೂ ಹೇಳಬಹುದಾಗಿತ್ತು. ಆದರೆ ರಾಜಕೀಯ ಪಕ್ಷಗಳು, ರಾಜಕೀಯ ಮುಖಂಡರುಗಳು ಸೇರಿ ಈ ತೀರ್ಮಾನವನ್ನು ತೆಗೆದುಕೊಳ್ಳಬೇಕಾದರೆ ಇದು ಸಂವಿಧಾನ ವಿರುದ್ಧವಾಗಿದೆ ಕಾನೂನು ವಿರುದ್ಧವಾಗಿದೆ. ಇದು ಕಾನೂನು ಚೌಕಟ್ಟಿನಲ್ಲಿ ಬರುವುದಿಲ್ಲ, ಬಚಾವತ್ ಅವಾರ್ಡ್‌ನಲ್ಲಿ ಅವರಿಗೆ ಅಧಿಕಾರ ಇಲ್ಲ, ಎನ್ನತಕ್ಕಂಥ ಮಾತನ್ನು ನಾನು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಸರ್ಕಾರದವರು ಸ್ಪಷ್ಟವಾಗಿ ಏನು ಹೇಳುತ್ತೀರಿ ಎನ್ನತಕ್ಕಂಥಾದನ್ನು ಹೇಳಬೇಕು. ಮುಂದೆ ಅವರು ಕೂಡಲೇ ಸ್ಟೇಟ್‌ಮೆಂಟ್ ಮಾಡಿದರೆ

ಮುಂದಿನ ಕ್ಲಾರಿಫಿಕೇಶನ್ ಕೂಡ ನಾವು ಕೇಳುವುದಕ್ಕೆ ತಯಾರಿದ್ದೇವೆ. ಇಲ್ಲದಿದ್ದರೆ ಇದು ದೊಡ್ಡ ಕ್ರಾಂತಿ ಆಗುತ್ತದೆ. ನಾನು ಸ್ಪಷ್ಟಪಡಿಸುತ್ತೇನೆ,

ಏಕೆಂದರೆ, ನಾವು ಹೀಗೆ ಬಿಟ್ಟು ಕೊಡುತ್ತಾ ಹೋದರೆ, ನಾವು ಒಗ್ಗಟ್ಟಾಗಿ ಇಲ್ಲ ಎನ್ನುವುದನ್ನು ತೋರಿಸಿಕೊಟ್ಟರೆ ಸಹಜವಾಗಿ ನಮ್ಮನ್ನು ಎಕ್ಸ್‌ಪ್ಲಾಯಿಟ್ ಮಾಡತಕ್ಕಂಥ, ಜನ ಹೊರಗಡೆ ಇದ್ದಾರೆ. ಇಂತಹ ಸಂದರ್ಭದಲ್ಲಿ ಸರ್ಕಾರ ಇರಬಹುದು, ವಿರೋಧಕ ಪಕ್ಷದವರು ಇರಬಹುದು, ನಾವು ಇರಬಹುದು ಒಂದು ಮನಸ್ಸಿನಿಂದ, ಒಗ್ಗಟ್ಟಾಗಿ ಈ ಒಂದು ಇಶ್ಯುಮೇಲೆ ಹೋಗಬೇಕಾಗುತ್ತದೆ. ಅದಕ್ಕಾಗಿ ಈ ಸಂದರ್ಭದಲ್ಲಿ, ಯಾವ ಪರಿಸ್ಥಿತಿಯಲ್ಲಿ ಅವರು ಈ ಪ್ಯಾನಲ್ ಮಾಡಿದರು, ಏಕೆ ಸ್ಟೇರಿಂಗ್ ಕಮಿಟಿಗೆ ಒಪ್ಪಿಕೊಂಡರು, ಏಕೆ ಎಕ್ಸಪರ್ಟ್ಸ್ ಕಮಿಟಿ ಅನೌನ್ಸ್ ಮಾಡಿದರು ಇವೆಲ್ಲವೂ ಕೂಡ ಇವತ್ತು ಒಂದು ಗೊಂದಲವನ್ನು ನಿರ್ಮಾಣ ಮಾಡತಕ್ಕಂಥ ಸೃಷ್ಟಿಮಾಡತಕ್ಕಂಥ ಪರಿಸ್ಥಿತಿ ಬಂದಿದೆ. ಇದರಿಂದ ಇಡೀ ರಾಜ್ಯದಲ್ಲಿ ಒಂದು ಗೊಂದಲ ಏಳತಕ್ಕಂಥ ಪರಿಸ್ಥಿತಿ ನಿರ್ಮಾಣ ಆಗಿದೆ. ಅದಕ್ಕಾಗಿ ದಯವಿಟ್ಟು ಇದರ ಬಗ್ಗೆ ಸ್ಪಷ್ಟೀಕರಣ ಕೊಡಬೇಕು ಮತ್ತು ಇದರ ಬಗ್ಗೆ ನಿಮ್ಮ ನಿಲುವು ಏನು ಎಂಬುದನ್ನು ಕೂಡ ಸ್ಪಷ್ಟವಾಗಿ ಹೇಳಬೇಕು. ನೀವು ಏನು ಸ್ಟೀರಿಂಗ್ ಕಮಿಟಿಯನ್ನು ಒಪ್ಪಿಕೊಂಡಿದ್ದೀರಾ. ಎಕ್ಸಪರ್ಟ್ ಕಮಿಟಿಯನ್ನು ಒಪ್ಪಿಕೊಳ್ಳುತ್ತೀರಾ, ಅಂಥವರಿಗೆ 14ನೇ ತಾರೀಖಿನೊಳಗಾಗಿ ಸಹಾಯ ಮಾಡುತ್ತೀರಾ ಎನ್ನತಕ್ಕಂಥಾದ್ದನ್ನು ಕೂಡ ಹೇಳಬೇಕು. ಏಕೆಂದರೆ ಇದು ನಮ್ಮ ಪ್ರಧಾನಮಂತ್ರಿಗಳ ಎದುರುಗಡೆ ಮಾನ್ಯ ಜೆ.ಹೆಚ್. ಪಟೇಲರ ಎದುರುಗಡೆ ಆದಂಥ ಮಾತು. ಆದ್ದರಿಂದ ಇದಕ್ಕೆ ತಾವು ಸಮಾಜಾಯಿಷಿ ಉತ್ತರವನ್ನು ಕೊಡಬೇಕೆಂದು ಹೇಳುತ್ತೇನೆ.

+ ಶ್ರೀ ಬಿ.ಎಸ್. ಯಡಿಯೂರಪ್ಪ : ಒಂದು ಮಾತನ್ನು ಪದೇ ಪದೇ ಹೇಳುತ್ತಿದ್ದರು. ಒಂದು ಜವಾಬ್ದಾರಿ ಸ್ಥಾನದಲ್ಲಿರುವ ತಮಗೆ ಅನ್ನಿಸಬಹುದು. ಇವತ್ತು ಬೇರೆ ಏನೂ ಚರ್ಚೆ ಆಗದಿದ್ದರೂ ಪರವಾಗಿಲ್ಲ. ನಮಗೆ ಯಾವುದೇ ಉತ್ತರ ಸಿಗದಿದ್ದರೂ ಪರವಾಗಿಲ್ಲ. ಈ ನದಿ ನೀರಿನ ಪ್ರಶ್ನೆ ಏನಿದೆ, ಇದು ದಿನೇ ದಿನೇ ಜಟಿಲವಾಗುತ್ತ ಹೋಗುತ್ತಿದೆ. ಏಕೆಂದರೆ ಬಹಳ ಸ್ಪಷ್ಟವಾದ ಒಂದು ಸಂಗತಿಯನ್ನು ನಾವು ಹೇಳಿಕೊಂಡು ಬರುತ್ತಿದ್ದೇವೆ. ಒಂದು ಸಾರಿ ಬಚಾವತ್ ತೀರ್ಪಾಗಿರುವಾಗ ಈ ತೀರ್ಮಾನದ ಅಡಿಯಲ್ಲಿ ನಾವು ಒಂದು ಪ್ರಾಜೆಕಟ್ಟು ಕಟ್ಟುತ್ತಾ ಇರತಕ್ಕಂಥ ಕಾಲದಲ್ಲಿ, ಪ್ರಧಾನಿಯವರಾಗಲೀ, ಮುಖ್ಯಮಂತ್ರಿಗಳಾಗಲೀ, ಮತ್ತೊಬ್ಬರಾಗಲೀ ಮಧ್ಯಪ್ರವೇಶ ಮಾಡುವುದಕ್ಕೆ ಬರುವುದಿಲ್ಲ ಎನ್ನುವಂಥ ಮಾತನ್ನು ಪ್ರಧಾನಿಯವರೇ ಹೇಳಿದ್ದರು. ನಾವು ಅದಕ್ಕೆ ಸಮಾಧಾನವಾಗಿ ಇದ್ದೆವು. ನಾನು ಒಂದು ಮಾತನ್ನು ಹೇಳಿದೆ. ನಮ್ಮ ಮುಖ್ಯಮಂತ್ರಿಗಳು, ನೀರಾವರಿ ಸಚಿವರು ಇಲ್ಲಿಂದ ಡೆಲ್ಲಿಗೆ ಹೋದರೆ ಈ ಸಭೆಗಳ ಮೂಲಕ ನಾವು ಒಂದಲ್ಲ ಒಂದರಲ್ಲಿ ಸಿಕ್ಕಿಕೊಂಡು ನರಳುವಂಥ ದುಸ್ಥಿತಿ ಬರುತ್ತದೆ. ಒಂದು ಸಾರಿ ನಾವು ಬಚಾವತ್ ತೀರ್ಪಿನ ಪ್ರಕಾರ ಕೆಲಸ ಮಾಡುತ್ತಿರಬೇಕಾದರೆ ಈ ಬಗ್ಗೆ ಮಾತುಕತೆಗೆ ಹೋಗಕೂಡದು ಎಂದು ನಾವು ಆವತ್ತಿನಿಂದ ಇವತ್ತಿನವರೆಗೆ ಹೇಳಿಕೊಂಡು ಬಂದಿರುವುದು ಇದೇ ಕಾರಣಕ್ಕೆ. ಮಧ್ಯೆ ಮಧ್ಯೆ ತಪ್ಪು ಮಾಡಿಕೊಂಡು ಬರುತ್ತಿದ್ದೀರಾ? ಹೈಕೋರ್ಟಿಗೆ ಹೋದ ತಕ್ಷಣ ನೀವು ನಮ್ಮ ಪರವಾಗಿ ಅಲ್ಲಿ ವಾದ ಮಾಡಲಿಲ್ಲ. ಅಲ್ಲಿ ಸಿಕ್ಕಿಕೊಂಡು ಕುಳಿತುಕೊಂಡಿರಿ. ಪ್ರಧಾನಮಂತ್ರಿಯವರು ಪತ್ರ ಬರೆದರು ಎಂದು ಹೇಳಿ ಮುಖ್ಯಮಂತ್ರಿಗಳು ಅಲ್ಲಿ ಹೋಗಿ ಕುಳಿತುಕೊಂಡಿರಿ. ಪ್ರಧಾನಮಂತ್ರಿಗಳು ಇದರಲ್ಲಿ ನಾನು ಮಧ್ಯಸ್ತಿಕೆ ವಹಿಸಲಿಕ್ಕೆ ಏನಿದೆ, ನಾನು ಒಂದು ರಾಜ್ಯಕ್ಕೆ ಪ್ರಧಾನಿಯಲ್ಲ, ಇಡೀ ದೇಶಕ್ಕೆ ಪ್ರಧಾನಿ, ಆ

ಒಂದು ಚೌಕಟ್ಟಿನಲ್ಲಿ ಕೆಲಸ ಮಾಡಬೇಕು, ಇದರಲ್ಲಿ ಪ್ರವೇಶ ಮಾಡುವಂಥ ಪ್ರಶ್ನೆ ಬರುವುದಿಲ್ಲ ಎಂದು ಹೇಳಿದರು. ಇದು ಮೆಚ್ಚಬೇಕಾದ ಸಂಗತಿ ಎಂದು ನಾವು ತಿಳಿದುಕೊಂಡಿದ್ದೆವು.

ನಮ್ಮ ಮುಖ್ಯ ಮಂತ್ರಿಗಳು ಇಂತ ಪ್ರಮುಖವಾದಂಥ ವಿಷಯಗಳ ಬಗ್ಗೆ ಅಧಿವೇಶನದಲ್ಲಿ ಚರ್ಚೆ ನಡೆದುದಕ್ಕೆ ನಾಳೆ ಉತ್ತರ ಕೊಡಬೇಕು. ಅಂತಹ ಸಮಯದಲ್ಲಿ ಅವರು ಅಲ್ಲಿದ್ದಾರೆ. ಏಕೆ? ನಾನು ಬೆಳಿಗ್ಗೆ ಹೇಳಿದೆ. ದಿನೇ ದಿನೇ ಒಂದು ರೀತಿಯಲ್ಲಿ ಸಿಕ್ಕಿಕೊಳ್ಳುವಂಥ ವ್ಯವಸ್ಥೆಯಾಗುತ್ತಿದೆ. ಪ್ರಧಾನಮಂತ್ರಿಗಳ ಮನೆಯಲ್ಲಿ ಇವತ್ತು ಕುಳಿತುಕೊಂಡು ಮತ್ತೆ ಒಂಭತ್ತು ಜನ ಟೆಕ್ನಿಕಲ್ ಕಮಿಟಿ, ಏಕೆ ಸ್ವಾಮಿ? ಯಾವ ಕಾನೂನಿನಲ್ಲಿ ಇದಕ್ಕೆ ಅವಕಾಶ ಇದೆ? ಒಂದು ಸಾರಿ ಕಾನೂನು ಚೌಕಟ್ಟಿನಲ್ಲಿ, ಬಚಾವತ್ ತೀರ್ಪಿನ ಪ್ರಕಾರ ನಾವು ಜಲಾಶಯವನ್ನು ಕಟ್ಟುತ್ತಿರಬೇಕಾದರೆ ಇದು ಮಾತುಕತೆಗೆ ಓಪನ್ ಮಾಡುವುದೇ ಅಪರಾಧ. ಪ್ರಧಾನ ಮಂತ್ರಿಗಳು ಮೊದಲು ಎರಡೂ ರಾಜ್ಯಗಳ ಅಧಿಕಾರಿಗಳ ಜೊತೆ ಮಾತನಾಡುತ್ತೇನೆ ಎಂದು ಹೇಳಿದ್ದು, ಮೊದಲನೇ ಒಂದು ಅಕ್ಷಮ್ಯ ಅಪರಾಧ.

ಮತ್ತೆ ಅವರು ಯಾರೋ ಆಂಧ್ರದ ಮುಖ್ಯಮಂತ್ರಿಗಳು ಕೂಗಿದರು, ನಿಮಗೆ ಕೊಟ್ಟಿರುವ ಬೆಂಬಲವನ್ನು ವಾಪಸ್ಸು ತೆಗೆದುಕೊಳ್ಳಬೇಕಾಗುತ್ತದೆ ಎಂದು ಹೇಳಿದರು ಎಂದು ಹೇಳಿ ನಾಲ್ಕು ಜನ ಮುಖ್ಯಮಂತ್ರಿಗಳ ಸಭೆಯನ್ನು ಕರೆದದ್ದು ಎರಡನೇ ಅಪರಾಧ. ಮತ್ತೆ ನಿನ್ನೆ ಒಂದು ಸ್ಟ್ಯಾಂಡ್ ತೆಗೆದುಕೊಂಡ ಮೇಲೆ, ನಿಮ್ಮ ರಾಜಕೀಯ ಗೊಂದಲವನ್ನು ನಿವಾರಣೆ ಮಾಡಿಕೊಳ್ಳುವುದಕ್ಕೆ ಇರುವಂಥ ಸಮಿತಿಯಲ್ಲಿ, 4 ಜನ ಮುಖ್ಯಮಂತ್ರಿಗಳ ಮತ್ತೊಂದು ಸಮಿತಿ ಮಾಡಿದಿರಿ. ಈಗ ಮತ್ತೆ ಇನ್ನೂ 24 ಗಂಟೆ ಮುಗಿದಿಲ್ಲ. ಮತ್ತೊಂದು ಹೊಸ ಪ್ರಯತ್ನ 9 ಜನರ ತಜ್ಞರ ಸಮಿತಿ. ಅದಕ್ಕೇ ನಾನು ಬೆಳಿಗ್ಗೆ ಹೇಳಿದೆ. ನಿಜವಾಗಿಯೂ ಸಹ ಇವತ್ತು ನಾನು ರಾಜಕಾರಣ ಮಾಡುವುದಕ್ಕೆ ರೆಡಿ ಇಲ್ಲ. ಇಲ್ಲಿ ಒಮ್ಮತದ ನಿರ್ಣಯ ತೆಗೆದುಕೊಳ್ಳೋಣವೆಂದು ಹೇಳಿದೆ. ಆಡಳಿತ ಪಕ್ಷದವರನ್ನು ನಾನು ಕೈಮುಗಿದು ಕೇಳಿದೆ. ಇಲ್ಲಿ ನಾವು ಸರ್ವಾನುಮತದ ನಿರ್ಣಯ ಮಾಡೋಣ ಯಾವುದೇ ಕಾರಣಕ್ಕೂ ಈ 4 ಜನ ಮುಖ್ಯಮಂತ್ರಿಗಳ ಜೊತೆ ನಮ್ಮ ರಾಜ್ಯದ ಮುಖ್ಯಮಂತ್ರಿಗಳು ಮಾತನಾಡುವುದು ಬೇಡ. ಆ ಸಮಿತಿ ಮುಂದೆ ಅಪರಾಧಿಗಳ ರೀತಿ ಕೈಕಟ್ಟಿಕೊಂಡು ಹೋಗುವುದು ಬೇಡ ಎಂದು ಹೇಳಿದೆ. ಈಗ ಆಂಧ್ರದ ಮುಖ್ಯಮಂತ್ರಿ ಇದ್ದಾರೆ. ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳೂ ಇರುವಂಥ ಸಮಯದಲ್ಲಿ 9 ಜನರ ಈ ತಜ್ಞರ ಸಮಿತಿ ಮಾಡಲು ಒಪ್ಪಿಕೊಂಡರು ಎಂದು ಹೇಳುವುದಾದರೆ, ಪರೋಕ್ಷವಾಗಿ ನಮ್ಮ ರಾಜ್ಯದ ಮುಖ್ಯಮಂತ್ರಿಗಳು ಪ್ರಧಾನಿಯವರ ಮಾತಿಗೆ ಮರುಳಾಗಿ, ಅಥವಾ ಇಕ್ಕಟ್ಟಿಗೆ ಸಿಕ್ಕಿಕೊಂಡು ಒಪ್ಪಿಕೊಂಡರು ಎಂದು ಅರ್ಥವಾಗುತ್ತದೆ.

ಅವರು ಪ್ರತಿಭಟನೆ ಮಾಡಿ ಈ 9 ಜನರ ತಜ್ಞರ ಸಮಿತಿಯ ಅಗತ್ಯವೇನಿದೆ ಎಂದು ಹೇಳಬೇಕಾಗಿತ್ತು. ಜ್ಯೋತಿ ಬಸುರವರು ಇರಲಿ ಮತ್ತೊಬ್ಬರು ಇರಲಿ. ದಯಮಾಡಿ ಇವತ್ತು ನಮ್ಮ ಅಭಿಪ್ರಾಯಗಳನ್ನು ಅಲ್ಲಿ ತಿಳಿಸುವಂಥ ವ್ಯವಸ್ಥೆ ಮಾಡಬೇಕು. ಯಾವುದೇ ಕಾರಣಕ್ಕೆ ಮಾತುಕತೆಯಾಗಬಾರದು. ಯಾವ ಕಾರಣಕ್ಕೆ ಈ 9 ಜನ ತಜ್ಞರ ಸಮಿತಿ ಮಾಡಿದ್ದಾರೆ? ಇದಕ್ಕೆ ನಮ್ಮ ಸಂಪೂರ್ಣ ವಿರೋಧ ಇದೆ. ಮತ್ತೆ ಲೇಟೆಸ್ಟ್ ಇನ್ಫರ್ಮೇಷನ್ ಏನೆಂದರೆ ಖರ್ಗೆಯವರು ಮಾಹಿತಿಯನ್ನೆಲ್ಲಾ

ಪ್ರಸ್ತಾಪ ಮಾಡಿದರು. ಈಗೇನು ಸುದ್ದಿ ಇದೆ, ದಯಮಾಡಿ ಅವನ್ನು ಸದನಕ್ಕೆ ಸ್ಪಷ್ಟ ಮಾಡಬೇಕು. ತಾವು ಮುಖ್ಯಮಂತ್ರಿಗಳನ್ನು ತಕ್ಷಣ ಸಂಪರ್ಕ ಮಾಡಬೇಕು. ಅಗತ್ಯವಿದ್ದರೆ, ಅಧಿವೇಶನವನ್ನು ಅರ್ಧಗಂಟೆ ಅಥವಾ ಒಂದು ಗಂಟೆ ಮುಂದೂಡಿ. ಏಕೆಂದರೆ, ನಾಳೆ ನಮ್ಮ ಅಧಿವೇಶನ ಮುಗಿದುಹೋಗುತ್ತದೆ. ವಾಸ್ತವಿಕ ಸ್ಥಿತಿ ಏನು ಎಂಬುದು ರಾಜ್ಯದ ಜನರಿಗೆ ಗೊತ್ತಾಗಬೇಕಾಗುತ್ತದೆ. ದಯಮಾಡಿ ಮುಖ್ಯಮಂತ್ರಿಗಳ ಸಂಪರ್ಕ ಮಾಡಿ, ಲೇಟೆಸ್ಟ್ ಪೊಸಿಷನ್ ಏನು, ಇವರೇನು ಇಕ್ಕಟ್ಟಿನಲ್ಲಿ ಸಿಕ್ಕಿಕೊಂಡಿದ್ದಾರೆ. ಏಕೆ ಬೆಳಿಗ್ಗೆ ಒಂದು, ಸಾಯಂಕಾಲ ಒಂದು ಮಾತುಕತೆಗೆ ಸಿಕ್ಕಿಕೊಂಡು ಒದ್ದಾಡುತ್ತಿದ್ದಾರೆ. ಇದನ್ನು ಸ್ಪಷ್ಟಮಾಡಬೇಕೆಂದು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಇದು ಬೇರೆಲ್ಲಾ ವಿಚಾರಗಳಿಗಿಂತ ಬಹಳ ಪ್ರಾಮುಖ್ಯತೆ ಇರತಕ್ಕಂಥ ವಿಚಾರ. ಇದನ್ನು ನಾವು ಯಾರೂ ಲಘುವಾಗಿ ತಿಳಿದುಕೊಳ್ಳತಕ್ಕಂಥಾದ್ದಲ್ಲ.

ಶ್ರೀ ಸಿ. ಭೈರೇಗೌಡ : ನಿಮಗೆ ಬರೀ ಇಷ್ಟು ಬಿಟ್ಟರೆ, ಬೇರೆ ಇನ್ನೇನೂ ಚರ್ಚೆ ಮಾಡಬೇಕಾಗಿಲ್ಲ.

(ಗೊಂದಲ)

ಅಧ್ಯಕ್ಷರು : ವಾಟಾಳ್ ನಾಗರಾಜರು ಮಾತನಾಡುತ್ತಿದ್ದಾರೆ. ರಾಜ್ಯದ ಹಿತದೃಷ್ಟಿಯಿಂದ ಅವರು ಮಾತನಾಡಬೇಕೆಂದರೆ, ನೀವು ಏಕೆ ಬೇಡ ಎಂದು ಹೇಳುತ್ತೀರಿ. ಅವರು ರಾಜ್ಯದ ಹಿತದೃಷ್ಟಿಯಿಂದ ಮಾತನಾಡಬೇಕೆಂದರೆ, ನಾವು ಹೇಗೆ ತಡೆಯುವುದಕ್ಕಾಗುತ್ತದೆ? ಇದು ರಾಜ್ಯದ ಆಸಕ್ತಿ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರಿಗೆ 14ನೇ ತಾರೀಖಿನೊಳಗೆ ವರದಿ ಕೊಡಬೇಕೆಂದು ಹೇಳಿದ್ದಾರೆ.

ಶ್ರೀ ಸಿ. ಭೈರೇಗೌಡ : ಬಚಾವತ್ ಅವಾರ್ಡಿಗೆ ನಾವು ಬದ್ಧವೆಂದು ಸ್ಪಷ್ಟವಾಗಿ ಹೇಳಿದ್ದಾರೆ.

(ಗೊಂದಲ)

ಶ್ರೀ ಸಿದ್ಧರಾಮಯ್ಯ : ಬಚಾವತ್ ತೀರ್ಪನ್ನು ರೀ-ಓಪನ್ ಮಾಡುವ ಪ್ರಶ್ನೆಯೇ ಇಲ್ಲ. ಅದರ ಬಗ್ಗೆ ಚರ್ಚೆ ಮಾಡುವ ಪ್ರಶ್ನೆಯೂ ಇಲ್ಲ. ಮುಖ್ಯಮಂತ್ರಿಗಳ ನಿಲುವು ಬಹಳ ಸ್ಪಷ್ಟವಾಗಿದೆ. ಮಾನ್ಯ ಖರ್ಗೆಯವರು ಹೋಗಿದ್ದಾಗ ಕೂಡ ನಮ್ಮ ನಿಲುವನ್ನು ಸ್ಪಷ್ಟಪಡಿಸಿದ್ದಾರೆ. ನೀವು ಬಂದ ಮೇಲೂ ಕೂಡ ಅದೇ ನಿಲುವು, ಸ್ಪಷ್ಟವಾಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಿಲುವು ಈಗಿಲ್ಲವಲ್ಲ.

ಶ್ರೀ ಸಿದ್ಧರಾಮಯ್ಯ : ನೀವೇ ಓದಿ ಹೇಳಿದಿರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದು ಆಗಿರುವುದು 3 ಗಂಟೆಗೆ

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಪ್ರಧಾನಿಯವರ ಮನೆಯಲ್ಲಿ ಸಭೆ ಏಕೆ ಕರೆದರು?

ಶ್ರೀ ಸಿದ್ಧರಾಮಯ್ಯ : ದಯಮಾಡಿ, ತಾವು ಇದಕ್ಕೆ ತೆರೆ ಎಳೆಯಬೇಕು. ಇವತ್ತು ಸಾಯಂಕಾಲ ಮುಖ್ಯಮಂತ್ರಿಗಳು ಬರುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಹಾಗಾದರೆ, ಮಹಾರಾಷ್ಟ್ರ ಮುಖ್ಯಮಂತ್ರಿಗಳನ್ನು ಏತಕ್ಕೆ ಕರೆಸಲಿಲ್ಲ ಹೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಕೇಂದ್ರದಲ್ಲಿ ಸರ್ಕಾರ ಉಳಿಸಿಕೊಳ್ಳುವುದಕ್ಕೆ, ನಮ್ಮ ರಾಜ್ಯದ ಹಿತವನ್ನು ಸಂಪೂರ್ಣವಾಗಿ ಬಲಿ ಕೊಡುತ್ತಿದ್ದೀರಿ.

ಶ್ರೀ ಸಿದ್ಧರಾಮಯ್ಯ : ಬೆಳಿಗ್ಗೆಯಿಂದ ಸಾಯಂಕಾಲದವರೆಗೂ ಇದೇ ಆಯಿತು. ನೀವೇ ಹೇಳಿ. ಬೆಳಿಗ್ಗೆ ಹೇಳಿದ್ದೀರಿ, ನಿನ್ನೆ ಹೇಳಿದ್ದೀರಿ. ನಮ್ಮ ನಿಲುವಿನಲ್ಲಿ ಯಾವುದೇ ಬದಲಾವಣೆ ಇಲ್ಲ. ಬಚಾವತ್ ಅವಾರ್ಡ್ ಪ್ರಕಾರ, ಏನು ತೀರ್ಪು ಕೊಟ್ಟಿದ್ದಾರೆ, ನಾವು ಅದರೊಳಗಡೆಯೇ ಕೆಲಸ ಮಾಡಬೇಕು.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಜೆ.ಹೆಚ್. ಪಟೇಲರಿಗೆ ರಾಜೀನಾಮೆ ಕೊಟ್ಟು ಮನೆಗೆ ಹೋಗಿ ಎಂದು ಕೇಳಬೇಕಾಗುತ್ತದೆ. ಮುಖ್ಯಮಂತ್ರಿಗಳ ರಾಜೀನಾಮೆಗೂ ನಾವು ಒತ್ತಾಯ ಮಾಡಬೇಕಾಗುತ್ತೆ. ನೀವು ಇದೇ ರೀತಿ ಮುಂದುವರಿಯುವುದಾದರೆ, ಮುಖ್ಯಮಂತ್ರಿಗಳಿಗೂ ರಾಜೀನಾಮೆ ಕೊಡಿ ಎಂದು ನಾವು ಕೇಳಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು : ವಾಟಾಳ್ ನಾಗರಾಜರು ಮಾತನಾಡಬೇಕಾದರೆ, ಅವರಿಗೆ ಚಾನ್ಸ್ ಕೊಡುವುದಿಲ್ಲವಲ್ಲ. ಎಂತಹ ಸ್ಥಿತಿ ಬಂತು, ಅವರು ಮೂರು ಸಲ ಎದ್ದು ನಿಂತರು, ಅವರು ಎದ್ದತಕ್ಷಣ ಬೈರೇಗೌಡರು ಎದ್ದು ಗದ್ದಲ ಮಾಡುತ್ತಾರೆ. ನಿಮಗೆ ಈ ಸದನದಲ್ಲಿ ಈ ಸ್ಥಿತಿ ಬರುತ್ತೆ ಎಂದು ನಾನು ಅಂದುಕೊಂಡಿರಲಿಲ್ಲ. ಬೈರೇಗೌಡರು ನಿಮ್ಮ ಸ್ನೇಹಿತರಾಗಿ, ನೀವು ಎದ್ದತಕ್ಷಣ, ಅವರೂ ಎದ್ದುನಿಲ್ಲುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಎಲ್ಲಕ್ಕೂ ತಾವೇ ಕಾರಣ ಎಂದು ನಾನು ಹೇಳಬೇಕಾಗಿದೆ. ಈ ಸ್ಥಿತಿ ಬರಬೇಕಾದರೆ, ತಾವೇ ಕಾರಣ ಎಂದು ಹೇಳಬೇಕಾಗುತ್ತದೆ.

ಒಬ್ಬ ಸದಸ್ಯರು : ಅವರಿಬ್ಬರ ಸ್ನೇಹ ಹೇಗಾಗಿದೆ ಎಂದರೆ, ನಾನು ಹೊಡೆದ ಹಾಗೆ ಮಾಡುತ್ತೇನೆ, ನೀನು ಅತ್ತ ಹಾಗೆ ಮಾಡು ಎಂಬಂತಾಗಿದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಇದನ್ನು ಒಂದು ಪ್ರತಿಷ್ಠೆಯ ಪ್ರಶ್ನೆಯನ್ನಾಗಿ ಅಥವಾ ಯಾವುದೇ ಪಕ್ಷದ ಪ್ರಶ್ನೆಯನ್ನಾಗಿ ತೆಗೆದುಕೊಳ್ಳುವುದು ಬೇಡ. ಇವರು ಜನತಾ ದಳದವರು, ನೀವೇನೋ ಹೇಳಿದಿರಿ ಎನ್ನುವುದಕ್ಕಿಂತ ಹೆಚ್ಚಾಗಿ, ಇವತ್ತು ಆಲಮಟ್ಟಿ ಜಲಾಶಯದ ಬಗ್ಗೆ ನಿಮಿಷ, ನಿಮಿಷಕ್ಕೂ, ಹೆಜ್ಜೆ ಹೆಜ್ಜೆಗೂ ನಮಗೆ ಅಪಾಯ ಕಾಣುತ್ತಾ ಇದೆ. ನಿನ್ನೆ ಮುಖ್ಯಮಂತ್ರಿಗಳು ತೆಗೆದುಕೊಂಡ ನಿರ್ಧಾರದ ಬಗ್ಗೆ ಬೆಳಿಗ್ಗೆ ಅದನ್ನು ಕೇಳಿ, ಬಹಳ ದಿಟ್ಟ ನಿಲುವು ಎಂದು ನಾವೆಲ್ಲರೂ ಸಂತೋಷಪಟ್ಟಿದ್ದೆವು. ಅದಾದ ನಂತರ ನಮಗೆ ಬಂದಂಥ ದಿಗಿಲು, ಈ ಚಾಲನಾ ಸಮಿತಿ ಎಂದು ಏನು ಸಂಯುಕ್ತ ರಂಗ ಸರ್ಕಾರ ಮಾಡಿದೆ

ಆಡಳಿತದ ಹೊಣೆಯನ್ನು ತೆರೆಮರೆಯಲ್ಲಿ ಹೇಳತಕ್ಕಂಥ ಸಮಿತಿಯು ಈ ವ್ಯವಹಾರವನ್ನು ಸಮಗ್ರವಾಗಿ ತನಿಖೆ ಮಾಡುವಂತೆ. 4 ಜನ ಮುಖ್ಯಮಂತ್ರಿಗಳಿಗೆ ಅಧಿಕಾರವನ್ನು ಕೊಟ್ಟರಲ್ಲ, ಅದರ ಬಗ್ಗೆ ಹೇಳಬೇಕೆಂದರೆ ಮೂಲಭೂತವಾಗಿ ಚಾಲನಾ ಸಮಿತಿಯಲ್ಲಿ ಚರ್ಚೆ ನಡೆದದ್ದೇ ಒಂದು ಅಪರಾಧ. ಚಾಲನಾ ಸಮಿತಿಗೂ ಇದಕ್ಕೂ ಸಂಬಂಧ ಏನಿದೆ? ಚಾಲನಾ ಸಮಿತಿ ಅದು ಸಂಯುಕ್ತ ರಂಗ ಸರ್ಕಾರಕ್ಕೆ, ಯಾವ ರೀತಿ ಯಾವ ಯಾವ ಸಂದರ್ಭದಲ್ಲಿ ಸರ್ಕಾರ ನಡೆಯಬೇಕು, ಯಾವ ಯಾವ ಚಿಂತನೆ ನಡೆಯಬೇಕು ಎಂಬ ಬಗ್ಗೆ ಇದೆ. ಇಲ್ಲಿಯೂ ಒಂದು ಸಾರಿ ಹಿಂದೆ ಶ್ರೀಮಾನ್ ರಾಮಕೃಷ್ಣ ಹೆಗಡೆಯವರ ಕಾಲದಲ್ಲಿ "ಚಿಂತನ ಚಿಲುಮೆ" ಎಂದು ಇತ್ತು. ಸ್ವಲ್ಪ ಹೆಚ್ಚುಕಡಿಮೆ ಇದೂ ಅದರ ಅಣ್ಣ ತಮ್ಮ ಇರಬೇಕೆಂದು ನಾನಂದುಕೊಂಡಿದ್ದೇನೆ. ಆ ಸಮಿತಿಗೆ 4 ಜನ ಮುಖ್ಯಮಂತ್ರಿಗಳನ್ನು ನೇಮಕ ಮಾಡಿ, ಆ 4 ಜನ ಮುಖ್ಯಮಂತ್ರಿಯವರೂ ಆಲಮಟ್ಟಿ ಜಲಾಶಯದ ಬಗ್ಗೆ ಮುಂದಿನ ತೀರ್ಮಾನ ಕೊಡುವಂಥ ಒಂದು ವ್ಯವಸ್ಥೆ ಬಂದತಕ್ಷಣ ಇಡೀ ರಾಜ್ಯದ ಜನತೆಗೆ ಬರ ಸಿಡಿಲು ಬಡಿದಹಾಗೆ ಆಗಿದೆ. ಈ ಪದವನ್ನು ತಾವು ಒಪ್ಪುತ್ತೀರೋ ಬಿಡುತ್ತೀರೋ. ಇದು ರಾಜ್ಯದ ಜನರಿಗೆ ಮಾಡಿದಂಥ ಮಹಾ ದ್ರೋಹ. ರಾಜ್ಯದ ಜನತೆಗೆ ಮಾಡಿದಂಥ ಅನ್ಯಾಯ, ಇದು ಒಂದು ಪಿತೂರಿ.

ಶ್ರೀ ಎಂ.ಸಿ. ನಾಣಯ್ಯ : ಅನ್ಯಾಯವಾಗುತ್ತದೆ, ಬಲಿ ಕೊಟ್ಟಿರಿ ಎಂದು ಹೇಳುವುದಕ್ಕಿಂತ ಏನು ಆಗಬೇಕು, ಏನು ಮಾಡಬೇಕೆಂಬುದನ್ನು ಹೇಳಿ. ಇಡೀ ಸದನವನ್ನು ಇದೇ ರೀತಿ ಕಳೆದುಬಿಟ್ಟಿರಿ. ಕೃಷ್ಣಾ, ಕಾವೇರಿ - ಇದನ್ನು ಬಿಟ್ಟು ಬೇರೆ ಯಾವುದೂ ಈ ಸದನದಲ್ಲಿ ಚರ್ಚೆಯಾಗಲಿಲ್ಲ. ಕೃಷ್ಣಾ, ಕಾವೇರಿ ವಿಷಯ ಎತ್ತಿ, ಇಡೀ ಸದನದ 40 ದಿವಸಗಳನ್ನೂ ಕಳೆದಿರಿ. ಯಾರಿಗೂ ಮಾತನಾಡಲಿಕ್ಕೆ ಅವಕಾಶ ಸಿಗಲಿಲ್ಲ, ನಿಮಗೆ ಮಾತನಾಡಲಿಕ್ಕೆ ಅವಕಾಶ ಸಿಕ್ಕಿತು. ಇನ್ನೊಂದು 5-6 ಜನರಿಗೆ ಅವಕಾಶ ಸಿಕ್ಕಿತು, ಸರ್ಕಾರಕ್ಕೆ ಉತ್ತರ ಹೇಳುವುದಕ್ಕೆ ಅವಕಾಶ ಸಿಕ್ಕಿತು. ಇನ್ನೇನಾಯಿತು ಈ ಸದನದಲ್ಲಿ ಏನೇನೋ ಚರ್ಚೆ ಮಾಡಿದಿರಿ. ಸದನ ಸೇರಿ 35 ದಿವಸ ಆಯಿತು. ದಿನ ಬೆಳಿಗ್ಗೆ ಎದ್ದರೆ ಇದೇ. ದಿನ ಬೆಳಿಗ್ಗೆ ಎದ್ದರೆ ಧರಣಿ, ದಿನಾ ಇದೇ ಆಯಿತಲ್ಲ, ನಿಮ್ಮ ನಾಯಕರು ಇದ್ದಾರೆ ಮಾತನಾಡಿಕೊಳ್ಳಿ. ಇದೇ ರೀತಿ ಆದರೆ, ಹಿಂದೆ ಬೇಕಾದಷ್ಟುಜನ ನಮ್ಮ ಸ್ನೇಹಿತರು ಇದ್ದಾರೆ. ಈ ಇಲಾಖೆಗಳ ಬೇಡಿಕೆಗಳ ಮೇಲೆ ಪೂರ್ಣ . ಚರ್ಚೆಯಾಗಲಿಲ್ಲ. ನಿನ್ನೆಯಂತೂ ಉತ್ತಮವಾದ ಚರ್ಚೆಯಾಯಿತು. ಸುಮಾರು 7-8ಜನ ಸದಸ್ಯರು ಉತ್ತಮವಾಗಿರತಕ್ಕಂಥ ಮಾತನ್ನಾಡಿದರು. ಇವತ್ತೂ ಕೂಡ ಅದೇ ತರಹ ಮಾತನಾಡಬೇಕಾಗುತ್ತೆ. ದಿನಾ ಬೆಳಿಗ್ಗೆ ಕೃಷ್ಣಾ, ಕಾವೇರಿ ಎಂದು ಹೇಳಿ ಇಲ್ಲದಿರತಕ್ಕಂಥ ವಿವಾದವನ್ನು ಸೃಷ್ಟಿ ಮಾಡಿಕೊಂಡು ಹೋಗುತ್ತಿದ್ದೀರಲ್ಲಾ. ಕುರ್ಚಿ, ಕುರ್ಚಿ, ಆ ಕುರ್ಚಿಯ ಮೇಲೆ ಏನು ಆಸೆ ಇದೆಯೋ. ಅದು ಯಾವಾಗ ನಿಮಗೆ ಸಿಗುತ್ತದೆಯೋ ಆ ದೇವರಿಗೆ ಗೊತ್ತು.

ಶ್ರೀ ಬಿ.ಎಸ್. ಯಡಿಯೂರಪ್ಪ : ನಿಮ್ಮ ಮುಖ್ಯಮಂತ್ರಿಗಳು ಏಕೆ ಹೋಗಿದ್ದಾರೆ.

(ಗೊಂದಲ)

ಶ್ರೀ ಸಿದ್ಧರಾಮಯ್ಯ : ರಾಜ್ಯದ ದೃಷ್ಟಿಯಿಂದ ಹೋಗಿದ್ದಾರೆ. ನೀವು ಇದೇ ರೀತಿ ಬೆಳಿಗ್ಗೆ ಸಾಯಂಕಾಲ ಮಾತನಾಡುತ್ತಾ ಹೋದರೆ ಹೇಗೆ?

(ಗೊಂದಲ)

ಶ್ರೀ ಎಂ.ಸಿ. ನಾಣಯ್ಯ : ಸರ್ಕಾರ ನಡೆಸುವವರಿಗೆ ಏನು ಮಾಡುವುದು ಎಂದು ಗೊತ್ತಿದೆ. ಬಚಾವತ್ ಅವಾರ್ಡ್ ನಮಗೆ ಅಂತಿಮ. ಯಾರಿಂದಲೂ ನಮಗೆ ಅಡ್ವೈಸ್ ಬೇಕಾಗಿಲ್ಲ. ಬಚಾವತ್ ತೀರ್ಮಾನವೇ ಅಂತಿಮ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈ ರೀತಿ ಮಾಡುವುದಕ್ಕೆ ಸಂವಿಧಾನದಲ್ಲಿ ಯಾವುದೇ ಅವಕಾಶ ಇಲ್ಲ. ಈ ರೀತಿ ಮಾಡಿಕೊಂಡು ಹೋದರೆ ಸರಿಯಲ್ಲ.

4.00 ಪಿ.ಎಂ

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಏನೂ ತೊಂದರೆ ಆಗಿಲ್ಲ. ಅಂದರೆ ಮಾನ್ಯ ಮುಖ್ಯಮಂತ್ರಿಗಳು ನಿನ್ನೆಯಿಂದ ಡೆಲ್ಲಿಯಲ್ಲಿ ಏಕೆ ಇದ್ದಾರೆ?....

(ಗೊಂದಲ)

ಶ್ರೀ ಎಂ.ಸಿ. ನಾಣಯ್ಯ : ನಿನ್ನೆ ತಾವು ಡೆಲ್ಲಿಗೆ ಹೋಗಿದ್ದಿರಲ್ಲ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈ ತೀರ್ಮಾನ ಪ್ರಧಾನ ಮಂತ್ರಿಗಳ ಮನೆಯಲ್ಲಿ ಆಗಿರುವಂಥಾದ್ದು. ನಿಮ್ಮ ಯುನೈಟೆಡ್ ಫ್ರಂಟ್ನವರು ನಡೆಸಿದಂತಹ ಕುತಂತ್ರ ಇದು. ಅದಕ್ಕೆ ತಾವು ಬಲಿಯಾಗಬೇಡಿ ಎಂದು ನಾನು ಹೇಳುತ್ತಿದ್ದೇನೆ. ಎಕ್ಸ್‌ಪರ್ಟ್ ಕಮಿಟಿಯನ್ನು ತಾವು ಒಪ್ಪಬೇಡಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಇದು ನಮ್ಮ ಕರ್ನಾಟಕ ರಾಜ್ಯಕ್ಕೆ ಮಾಡಿರತಕ್ಕಂಥ ಮೋಸ. ಕರ್ನಾಟಕ ರಾಜ್ಯಕ್ಕೆ ಬೆಂಕಿ ಹಚ್ಚಿದ್ದಾರೆ ಕರ್ನಾಟಕ ರಾಜ್ಯಕ್ಕೆ ಮೋಸ ಮಾಡಿದ್ದಾರೆ.

(ಗೊಂದಲ)

ಶ್ರೀ ಸಿದ್ಧರಾಮಯ್ಯ : ನಾವು ಬಚಾವತ್ ತೀರ್ಪಿಗೆ ಬದ್ಧವಾಗಿದ್ದೇವೆ ಎನ್ನುವುದನ್ನು ಈಗಲೂ ಹೇಳಿದ್ದೇವೆ.

(ಗೊಂದಲ)

ಶ್ರೀ ಎಂ. ಶ್ರೀನಿವಾಸ್ : ತಾವು ಪ್ರಧಾನ ಮಂತ್ರಿಗಳು ಕರೆದರೆ ಏಕೆ ಹೋಗಬೇಕಾಗಿತ್ತು?

(ಗೊಂದಲ)

ಶ್ರೀ ಸಿದ್ಧರಾಮಯ್ಯ : ಇದು ಒಕ್ಕೂಟ ವ್ಯವಸ್ಥೆ, ಹೋಗಬೇಕಾಗುತ್ತದೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ನಾವು ಮಾನ್ಯ ಮುಖ್ಯಮಂತ್ರಿಗಳ ರಾಜೀನಾಮೆಯನ್ನು ಕೇಳಬೇಕಾಗುತ್ತದೆ.....

(ಗೊಂದಲ)

ಶ್ರೀ ಎಂ.ಸಿ. ನಾಣಯ್ಯ : ರಾಜೀನಾಮೆ ಏಕೆ ಕೊಡಬೇಕು? ರಾಜೀನಾಮೆ ಕೊಡಬೇಕಾಗಿಲ್ಲ. ರಾಜಕಾರಣ ಮಾಡುವುದಕ್ಕೆ ಇಡೀ ಸದನದಲ್ಲಿ ಕೃಷ್ಣಾ ಕಾವೇರಿ ಬಿಟ್ಟರೆ ನಿಮಗೆ ಬೇರೆ ಏನೂ ಸಿಗಲಿಲ್ಲ.

(ಗೊಂದಲ)

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೆ, ಅನ್ಯಾಯವಾಗಿದೆ ಅನ್ಯಾಯವಾಗಿದೆ ಎಂದು ಹೇಳುತ್ತಿದ್ದಾರೆ ಏನು ಅನ್ಯಾಯ ಆಗಿದೆ. ಇವರು ಬರೀ ರಾಜಕೀಯ ಮಾಡುತ್ತಿದ್ದಾರೆ ಪತ್ರಿಕೆಗಳಲ್ಲಿ ಬರಬೇಕು ಅದಕ್ಕೆ ಈ ನಾಟಕ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಇದು ಕರ್ನಾಟಕ ರಾಜ್ಯಕ್ಕೆ ಆಗಿರತಕ್ಕಂಥ ತೀವ್ರವಾದ ಅನ್ಯಾಯ, ಇದು ಅನ್ಯಾಯವಲ್ಲದೇ ಬೇರೇನೂ ಅಲ್ಲ.

(ಗೊಂದಲ)

ಶ್ರೀ ಸಿ. ಬೈರೇಗೌಡ : ಏನು ಅನ್ಯಾಯವಾಗಿದೆ?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಕರ್ನಾಟಕ ರಾಜ್ಯಕ್ಕೆ ಬೆಂಕಿ ಬಿದ್ದಿದೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : 4 ಜನ ಮುಖ್ಯಮಂತ್ರಿಗಳ ಒಂದು ಪ್ಯಾನಲ್ ಮಾಡಿದ್ದಾರೆ. ಏಕೆ ಮಾಡಿದರು? ಇದು ಅನ್ಯಾಯವಲ್ಲವೇ?

(ಗೊಂದಲ)

ಶ್ರೀ ಸಿ. ಬೈರೇಗೌಡ : ನಮ್ಮ ಮುಖ್ಯಮಂತ್ರಿಗಳು ಅದಕ್ಕೆ ಏನು ಹೇಳಿದ್ದಾರೆ ಹೇಳಿ ನೋಡೋಣ.

(ಗೊಂದಲ)

SRI R.V. DESHPANDE : We will implement it.

SRI M. MALLIKARJUNA KHARGE : Before 14th August the Committee of experts will submit report to the Panel of Steering Committee Members.

SRI SIDDARAMAIAH : Bachawat report is final. We are bound by the Bachawat Award.

ಶ್ರೀ ಸಿ. ಬೈರೇಗೌಡ : ಕರ್ನಾಟಕದ ಮುಖ್ಯಮಂತ್ರಿಗಳು ಅದನ್ನು ಒಪ್ಪಿದ್ದಾರೆಂದು ಎಲ್ಲಿಯಾದರೂ ಇದೆಯೇ?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : 4 ಜನ ಮುಖ್ಯಮಂತ್ರಿಗಳ ಪ್ಯಾನಲ್ ನೇಮಕ ಮತ್ತು 9ಜನ ತಾಂತ್ರಿಕ ಸದಸ್ಯರನ್ನು ನೇಮಕ ಮಾಡುವಾಗ ವಿರೋಧ ಮಾಡಬೇಕಾಗಿತ್ತು.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, "Karnataka Chief Minister Sri J.H. Patel today welcomed the appointment of 9 member Expert Committee to assist the Panel..."

ಮಾನ್ಯ ಮುಖ್ಯಮಂತ್ರಿಗಳು ಸ್ವಾಗತ ಮಾಡಿದ್ದಾರೆ. ಈ ಅಧಿಕಾರವನ್ನು ಅವರಿಗೆ ಯಾರು ಕೊಟ್ಟರು? ಮಾನ್ಯ ಮುಖ್ಯಮಂತ್ರಿಗಳೇ ತಾವು ರಾಜೀನಾಮೆ ಕೊಟ್ಟು ಮನೆಗೆ ಹೋಗಿ, ರಾಜ್ಯದ ಹಿತವನ್ನು ಕಾಪಾಡುವುದಕ್ಕೆ ನಿಮಗೆ ಶಕ್ತಿ ಇಲ್ಲ ಎಂದು ನಾವು ಕೇಳಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು : ಈಗ ಸಭೆಯನ್ನು 5.00 ಗಂಟೆಯವರೆಗೂ ಮುಂದೂಡುತ್ತೇನೆ.

(ಸದನವು 4.10ನಿಮಿಷಕ್ಕೆ ಮುಂದೂಡಲ್ಪಟ್ಟು ಮತ್ತೆ 5.00ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)

(ಸಭೆಯು 5.00ಕ್ಕೆ ಪ್ರಾರಂಭವಾಯಿತು. ಮಾನ್ಯ ರಮೇಶ್‌ಕುಮಾರ್, ಅಧ್ಯಕ್ಷರು, ತಮ್ಮ ಪೀಠದಲ್ಲಿದ್ದರು)

ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚೆ

ಆಲಮಟ್ಟಿ ಡ್ಯಾಂನ್ನು ಎತ್ತರಿಸಬೇಕೋ, ಬೇಡವೋ ಎನ್ನುವ ಬಗ್ಗೆ ಸಮಿತಿ ರಚನೆ.

+ ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಈಗ ತಾನೇ ಯು.ಎನ್.ಐ. ವಿಷಯ ಬಂತು. ರಕ್ಷಣ ನಿಮಗೆ ನಾನು ಕಾಪಿ ಕಳುಹಿಸಿಕೊಡುವಂತಹ ಪ್ರಯತ್ನ ಮಾಡಿದ್ದೇನೆ. ಬಹುಶಃ ತಮಗೆ ತಲುಪುವುದರೊಳಗಾಗಿ ತಾವು ಐದು ಗಂಟೆಯವರೆಗೆ ಸಭೆಯನ್ನು ಮುಂದೂಡಿದಿರಿ. ಒಂದೇ ಒಂದು ವಿಚಾರ ಇದೆ. ಚರ್ಚೆ ಆಗುವಂತಹ ಕಾಲದಲ್ಲಿ ಒಂದು ಮಾತು ಬಂತು. ಯಡಿಯೂರಪ್ಪನವರೇ, ನಮ್ಮ ಚೀಫ್ ಮಿನಿಸ್ಟರ್ ಆಗಲಿ, ಮತ್ತೊಬ್ಬರು ಆಗಲೀ ಯಾವುದೇ ಕಾರಣಕ್ಕೆ ಈ 9 ಜನರ ಎಕ್ಸ್‌ಪರ್ಟ್ ಕಮಿಟಿಗೆ ನಾವು ಒಪ್ಪಿಗೆ ನೀಡಿಲ್ಲ. ನಾವೇನು ಸ್ವಾಗತ ಮಾಡಿಲ್ಲ ಎನ್ನುವಂತಹ ಹಂತದಲ್ಲಿ, ಚರ್ಚೆ ಆಗುತ್ತಿರುವಂತಹ ಕಾಲದಲ್ಲಿ ಈ ಟೆಲಿಪ್ರಿಂಟರ್‌ನಲ್ಲಿ ಯುಎನ್‌ಐನಿಂದ ಬಂದಂತಹ ವಿಚಾರವನ್ನು ಓದಲು ಪ್ರಯತ್ನ ಮಾಡಿದೆ. ರೆಕಾರ್ಡ್ಗೆ ಹೋಗಲಿ.

ಅಧ್ಯಕ್ಷರು : ಒಂದೇ ಒಂದು ನಿಮಿಷ. ನನ್ನ ಮನಸ್ಸಿನಲ್ಲಿ ಇರುವಂತಹದು ಏನು ಅಂದರೆ, ಇಷ್ಟು ದಿವಸ ಅಧಿವೇಶನ ಚೆನ್ನಾಗಿ ನಡೆಸಿಕೊಂಡು ಬಂದಿದ್ದೇವೆ. ನಾಳೆ ಒಂದು ದಿವಸ ಮುಗಿಸಿ ನಾಡಿದ್ದು ಅಡ್ಜರ್ನ್ ಆಗುತ್ತದೆ. ನನಗೇನು ಅಂದರೆ ಒಂದು ಸ್ವಲ್ಪ ಉದ್ವೇಗದ ವಾತಾವರಣ ಉಂಟಾದರೂ ಕೂಡ ನಾನು ತಾಳ್ಮೆ ಕಳೆದುಕೊಳ್ಳುವುದಕ್ಕೆ ತಯಾರಿಲ್ಲ. ಏಕೆಂದರೆ ಕಹಿ 'ಏನೂ ನನ್ನ ಮನಸ್ಸಿನಲ್ಲಿ ಉಳಿಯುವುದು ಬೇಡ ಎಂದು. ನಾನು ಸುಮ್ಮನೇ ನೆಮ್ಮದಿಯಿಂದ ಕುಳಿತು ಬಿಡುತ್ತಾ ಇದ್ದೇನೆ. ಬೇರೆ ಏನೂ ನನ್ನದು ಪ್ರತಿಕ್ರಿಯೆ ಇಲ್ಲ. ಕಡೆಯಲ್ಲಿ ಏನೋ ಒಂದು ಆಕಸ್ಮಾತ್ ಕಹಿಯಾಗಿ ಏನಾದರೂ ಆಗಿಬಿಟ್ಟರೆ ಅದೇ ಮನಸ್ಸಿನಲ್ಲಿ ಉಳಿಯುತ್ತದೆ. ಅದು ಏಕೆ ಆಗಬೇಕು ಎಂದು ಸುಮ್ಮನೆ ಕುಳಿತುಕೊಳ್ಳುತ್ತೇನೆ. ನಿಮ್ಮದು ಏನು ಹಕ್ಕು ಇದೆ. ಆ ಕೆಲಸ ನಡೆಯಲಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಆತಂಕಗೊಳ್ಳುವಂತಹ ಸಂಗತಿ ಏನು ಇದೆ ಎಂದರೆ, The Karnataka Chief Minister Mr. J.H. Patel to-day welcomed the Constitution of the 9 member experts committee to assit the panel of Chief Ministers to help resolve the problem arising out of Almatti dam issue. Mr. Patel told UNI after the meeting that he was happly that Andhra Pradesh had agreed to the suggestion of the Prime Minister Sri H.D. Devegowda for the constitution of an expert team drawn from non Krishna basin States. The experts would advise the Chief Ministers after inspecting both the sides of the Krishna basin. We will adhere to the impartial recommendations of the experts Committee, then he added." This is important.

"He clarified that there was no question of reopening the Bachawat Commission reward and the experts were...."

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಪೂರ್ತಿ ಮಾಡುತ್ತೇನೆ. ದಯಮಾಡಿ "experts were there only to see if there was any violation of Karnataka of Andhra Pradesh since both sides had levelled charges against each other. He said, work on the Almatti dam project would go on as schedule and the stoppage of work right be there only to facilitate the experts team to carry out their task."

ಇಲ್ಲಿ ಇಷ್ಟೇ. ನಾನೇನೂ ಮಾತನಾಡುವುದಕ್ಕೆ ಇಷ್ಟಪಡುವುದಿಲ್ಲ. ಸನ್ಮಾನ್ಯ ಅಧ್ಯಕ್ಷರೇ, ಪ್ರಧಾನಿಯವರ ಆದೇಶದ ಪ್ರಕಾರ 9 ಜನರ ಎಕ್ಸ್‌ಪರ್ಟ್ ಕಮಿಟಿ ರಚನೆ ಆಯಿತು. ನಿನ್ನ ಮಾತುಕತೆ ಮುಗಿದು ಹೋಯಿತು. ಬೆಳಿಗ್ಗೆ ನಾಲ್ಕು ಜನ ಮುಖ್ಯಮಂತ್ರಿಗಳ ಒಂದು ಸಮಿತಿ ಆಯಿತು. ಪ್ರಧಾನಿಯವರ ಮನೆಯಲ್ಲಿ ಸೇರಿದರು.ಪ್ರಧಾನಿಯವರ ಆದೇಶದಂತೆ ಇವತ್ತು 9 ಜನರ ಎಕ್ಸ್‌ಪರ್ಟ್ ಕಮಿಟಿ ಆಗಿದೆ. ಲೋಕಸಭೆಯಲ್ಲಿ ಚರ್ಚೆ ಆಗಿ ಅಧ್ಯಕ್ಷ ಪೀಠದಿಂದ ಮಾಡಿದಂತಹ ಸಮಿತಿ ಇದಲ್ಲ. ಅದಕ್ಕೇನು ಲೀಗಲ್ ಸ್ಯಾಂಕ್ಟಿಟಿ ಇಲ್ಲ. ಎರಡನೆಯದು, ಮಂತ್ರಿಮಂಡಲದ ಸಭೆ ಕರೆದು ಮಂತ್ರಿ ಮಂಡಲ ರಚನೆ ಮಾಡಿದಂತಹ ಒಂದು ಸಮಿತಿ ಅಲ್ಲ. ಆ ಪ್ರಶ್ನೆನೂ ಬರುವುದಿಲ್ಲ. ಇವತ್ತು ನಮ್ಮ ರಾಜ್ಯದ ಮುಖ್ಯಮಂತ್ರಿಗಳು ನಾನು ಈ ಸದನದ ನಡೆಯುವಂತಹ ಕಾಲದಲ್ಲಿ ಸದನ ಬಿಟ್ಟು ದೆಹಲಿಗೆ ಬಂದಿದ್ದೇನೆ. ಏನು ಮಾತುಕತೆ ಆಯಿತು, ಅದರ ವರದಿಯನ್ನು ಹೋಗಿ ಒಪ್ಪಿಸುವಂತಹದು. ನನ್ನ ಕರ್ತವ್ಯ. ನಾನೇನು ಮಾಡುತ್ತಿದ್ದೇನೆ? ರಾಜ್ಯದ ಜನ ಏನೆಂದುಕೊಳ್ಳಬಹುದು. ಸದನ ಏನು ತಿಳಿದುಕೊಳ್ಳಬಹುದು ಎನ್ನುವಂತಹ ಭಯವೂ ಇಲ್ಲದೇ ಇವತ್ತು ಈ ತರಹ ಸ್ವಾಗತ ಮಾಡುವುದು ಒಂದು ಕಡೆ. ಅಂದರೆ ನಾನು ಬೆಳಗ್ಗೆ ಸಂಶಯ ವ್ಯಕ್ತಪಡಿಸಿದ್ದೆ. ಯಾವುದೇ ಕಾರಣಕ್ಕೆ ಈ ಎಕ್ಸ್‌ಪರ್ಟ್ ಕಮಿಟಿ ಎಂದು ಹೇಳುವಂತಹ ಜನ ಕರ್ನಾಟಕಕ್ಕೆ ಬಂದರೆ ಗಡಿ ಒಳಗಡೆ ಪ್ರವೇಶ ಮಾಡುವುದಕ್ಕೆ ಬಿಡುವುದಿಲ್ಲ. ಅವರಿಗೆ ಎಚ್ಚರಿಕೆಯನ್ನು ಕೊಡಬೇಕಾಗುತ್ತದೆ, ಸದನದ ಅಭಿಪ್ರಾಯವನ್ನು ತಿಳಿಸಿ ಎಂದು ಹೇಳಿದೆ. ನಮ್ಮ ಅಭಿಪ್ರಾಯಕ್ಕೆ ನಿಜಕ್ಕೂ ಸರ್ಕಾರ ಗೌರವ ಕೊಟ್ಟಿದ್ದರೆ, ಆ ವಿಷಯವನ್ನು ತಿಳಿಸುವಂತಹ ಪ್ರಯತ್ನ ಮಾಡಬೇಕಾಗಿತ್ತು.

ಅದು ಆಗಲಿಲ್ಲ. ಇವತ್ತು ಒಂದೇ ಮಾತಿನಲ್ಲಿ ನಾನು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಒಂದು ರೀತಿ ಆಲಮಟ್ಟಿ ಅಣೆಕಟ್ಟು ಈ ಒಂದು ವ್ಯವಹಾರ ಒಂದು ಪಾರ್ಟ್ ಅಫೈರ್ ಆಗಿ ದೆಹಲಿಯಲ್ಲಿ ಕುಳಿತಿರುವಂತಹುದು.

ಅವರ ಪೊಲಿಟಿಕಲ್ ಅಫೈರ್ ಕಮಿಟಿಯಲ್ಲಿ ಚರ್ಚೆ ಆಗುವಂತಹದು. ಈ ಮಟ್ಟಿಗೆ ಇವತ್ತು ಬಂದಿದೆ. ನಾನು ಇಷ್ಟೇ ನಿಮಗೆ ಹೇಳುವುದಕ್ಕೆ ಇಚ್ಛಿಪಡುವಂತಹದು. ಈ ಸದನ ನಡೆಯುವಂತಹ ಕಾಲದಲ್ಲಿ ಆಲಮಟ್ಟಿ ಅಣೆಕಟ್ಟು ಕಟ್ಟುವುದರ ಬಗ್ಗೆ ಈಗಾಗಲೇ ಬಚಾವತ್ ಆಯೋಗದ ತೀರ್ಪು ಇದ್ದರೂ ಸಹ ಯಾವುದೇ ಸ್ಯಾಂಕ್ಷಿಟಿ ಇಲ್ಲದೇ ಇರುವಂತಹ ಎಕ್ಸ್‌ಪರ್ಟ್ ಕಮಿಟಿ ಬರುವುದಕ್ಕೆ ನಮ್ಮ ಮುಖ್ಯಮಂತ್ರಿಗಳೇ ಒಪ್ಪಿಗೆ ಕೊಟ್ಟಿರುವುದು, ಸ್ವಾಗತ ಮಾಡಿರುವಂಥದ್ದು. ಅವರು ಬಂದಾಗ ನಾನು ಕೆಲಸ ನಿಲ್ಲಿಸುವುದಕ್ಕೆ ಸಿದ್ಧ ಇದ್ದೇನೆ ಎಂದು ಸೂಚನೆ ಕೊಟ್ಟಿರುವಂಥದ್ದು. ಇದೊಂದು ಅಕ್ಷಮ್ಯ ಅಪರಾಧ. ನಮ್ಮ ನೀರಾವರಿ ಸಚಿವರು ಮಾನ್ಯ ಮುಖ್ಯಮಂತ್ರಿಗಳು ಇವತ್ತು ಕರ್ನಾಟಕ ರಾಜ್ಯದ ಜನಕ್ಕೆ ಹಿಂದೆದೂ ಯಾರೂ ಮಾಡದೇ ಇರುವಂತಹ ಒಂದು ದೊಡ್ಡ ಅಪರಾಧ, ದ್ರೋಹ ಮಾಡಿದ್ದಾರೆ. ಇವರು ಅಧಿಕಾರದಲ್ಲಿ ಮುಂದುವರಿಯುವಂತಹ ನೈತಿಕ ಹಕ್ಕು ಇಲ್ಲ. ಮೊದಲು ರಾಜೀನಾಮೆ ಕೊಟ್ಟು ತೊಲಗಬೇಕು ಇವರು ಎಂದು ನಾನು ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಇವರಿಗೆ ಇವರ ಕುರ್ಚಿಯ ಚಿಂತೆ. ಅಲ್ಲಿ ಪ್ರಧಾನಿಯವರಿಗೆ ಪ್ರಧಾನಿ ಕುರ್ಚಿಯ ಚಿಂತೆ. ಇವರಿಬ್ಬರೂ ಕುರ್ಚಿ ಉಳಿಸಿಕೊಳ್ಳುವುದಕ್ಕೋಸ್ಕರ ರಾಜ್ಯದ ಜನಕ್ಕೆ ದ್ರೋಹ ಮಾಡುವಂತಹ ಅಕ್ಷಮ್ಯ ಅಪರಾಧ ಮಾಡಿದ್ದಾರೆ. ನೀವು ರಾಜೀನಾಮೆ ಕೊಟ್ಟು ಮನೆಗೆ ಹೋಗಬೇಕು ಎಂದು ನಾನು ಒತ್ತಾಯ ಮಾಡುತ್ತೇನೆ. ಇದನ್ನು ಬಿಟ್ಟು ಬೇರೆ ಯಾವುದೇ ಚರ್ಚೆ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಇವತ್ತು ಮುಖ್ಯಮಂತ್ರಿಗಳು ಬಂದು ಕ್ಷಮಾಪಣೆಯನ್ನು ಕೇಳಬೇಕು. ಈ ಎಕ್ಸ್‌ಪರ್ಟ್ ಕಮಿಟಿಯನ್ನು ನಾನು ಒಪ್ಪುವುದಿಲ್ಲ ಎನ್ನುವಂತಹ ಭರವಸೆಯನ್ನು ಕೊಡುವವರೆಗೆ ಒಂದು ಕ್ಷಣ ಇವರು ಅಧಿಕಾರದಲ್ಲಿ ಮುಂದುವರಿಯುವಂತಹ ಹಕ್ಕು ಇಲ್ಲ. ಅಧಿಕಾರ ಬಿಟ್ಟು ತೊಲಗಿ ಎಂದು ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಸಿದ್ಧರಾಮಯ್ಯ : ಮಾನ್ಯ ಅಧ್ಯಕ್ಷರೆ, ಇವರು ಹೇಳಿದ ತಕ್ಷಣ ನಾವು ಮನೆಗೆ ಹೋಗುವುದಕ್ಕೆ ಅಲ್ಲ ಬಂದಿರುವುದು.

SRI B.S. YADIYURAPPA : You have no rights to continue.

ಶ್ರೀ ಸಿದ್ಧರಾಮಯ್ಯ : ಜನ ತೀರ್ಪು ಕೊಟ್ಟಿರುವುದರಿಂದ ನಾವು ಇಲ್ಲಿ ಬಂದು ಕುಳಿತಿರುವುದು. ಯಡಿಯೂರಪ್ಪನವರು ಮನೆಗೆ ಹೋಗಿ ಎಂದರೆ ಹೋಗುವುದಕ್ಕಲ್ಲ ನಾವು ಬಂದಿರುವುದು. ಯಡಿಯೂರಪ್ಪನವರು ಎಷ್ಟೇ ಸಾರಿ ಕುರ್ಚಿ, ಕುರ್ಚಿ ಎಂದುಕೊಂಡರೂ ಕೂಡ ಶ್ರೀಮಾನ್ ಯಡಿಯೂರಪ್ಪನವರಿಗೆ ಕುರ್ಚಿ ಇಲ್ಲೆ ಸಿಗುವುದು ಕಷ್ಟ. ಆದ್ದರಿಂದ ಮಾನ್ಯ ಅಧ್ಯಕ್ಷರೇ ಇದರಲ್ಲಿ ಬಹಳ ಸ್ಪಷ್ಟವಾಗಿದೆ.

ಅಧ್ಯಕ್ಷರು : ಯಡಿಯೂರಪ್ಪನವರಿಗೆ ಸಿಕ್ಕುವುದಿಲ್ಲ. ಯಾರಿಗೆ ಸಿಗುತ್ತದೆ ಎಂದು ಹೇಳಾದರೂ ಹೇಳಿ.

ಶ್ರೀ ಸಿದ್ಧರಾಮಯ್ಯ : ಜನ ನಮಗೆ ಅಧಿಕಾರ ಕೊಟ್ಟಿದ್ದಾರೆ, ಅಧಿಕಾರ ಮಾಡೋಣ. ಆಮೇಲೆ ಮುಂದೆ ಯಾರಿಗೆ ಅಧಿಕಾರ ಕೊಡುತ್ತಾರೆಂದು ನೋಡೋಣ. ಈಗ ಜನ ನಮಗೆ ಅಧಿಕಾರ ಕೊಟ್ಟಿದ್ದಾರೆ. ನಿಮ್ಮನ್ನು ತಿರಸ್ಕಾರ ಮಾಡಿದ್ದಾರೆ.

ನಿಮಗೆ ಬಂದಾಗ ನೋಡೋಣ, ಜನ ಯಾರಿಗೆ ಕೊಡುತ್ತಾರೆ ಎಂದು. ಇನ್ನೂ ಚುನಾವಣೆ ಬರುತ್ತದೆಯಲ್ಲಾ. ಆಗ ಜನ ಯಾರಿಗೆ ಕೊಡುತ್ತಾರೆಂದು ನೋಡೋಣ. ಜನರ ಬಳಿಗೆ ಹೋಗೋಣ.

(ಗೊಂದಲ)

ಶ್ರೀ ಎಂ. ಶ್ರೀನಿವಾಸ್ : ಜನ ಕೊಡುತ್ತಾರೆ ನೋಡಿ.

(ಗೊಂದಲ)

ಶ್ರೀ ಸಿದ್ಧರಾಮಯ್ಯ : ನಿಮ್ಮಿಂದ ನಾವು ಪಾಠ ಕಲಿಯಬೇಕಾದ ಅಗತ್ಯ ಇಲ್ಲ. ನಮಗೂ ಗೊತ್ತಿದೆ. ಈ ರಾಜ್ಯದ ಹಿತ ಕಾಪಾಡತಕ್ಕ ಜವಾಬ್ದಾರಿ ನಮಗೂ ಇದೆ. ಯಾರಿಂದಲೂ ಕೂಡ ಪಾಠ ಹೇಳಿಸಿಕೊಳ್ಳಬೇಕಾದಂತಹ ಅಗತ್ಯ ಇಲ್ಲ. ರಾಜ್ಯದ ಹಿತವನ್ನು ಯಾವ ಕಾರಣಕ್ಕೂ ಕೂಡ ಬಲಿ ಕೊಡತಕ್ಕ ಪ್ರಶ್ನೆ ಬರುವುದಿಲ್ಲ. ಅದನ್ನು ರೀ ಓಪನ್ ಮಾಡುವುದಾಗಲೇ ಅವರ ಬಗ್ಗೆ ಚರ್ಚೆ ಆಗಲಿ ಪ್ರಶ್ನೆ ಇಲ್ಲ. ಅದರ ಬಗ್ಗೆ ಪ್ರಶ್ನೆಯೇ ಇಲ್ಲ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಬ್ರಹ್ಮ ಬಂದರೂ ನಮ್ಮ ಹಕ್ಕನ್ನು ಬಿಟ್ಟು ಕೊಡುವುದಿಲ್ಲ.

ಶ್ರೀ ಸಿದ್ಧರಾಮಯ್ಯ : ನಾವು ಕೂಡ ನಿಮಗಿಂತ ಹೆಚ್ಚಾಗಿ ಇದ್ದೇವೆ

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ನೀರು ಬಿಟ್ಟು ಬಂದಿದ್ದೀರಿ, ಜನ ಯಾವ ರೀತಿ ಹೇಳುತ್ತಾರೆ ನೋಡಿ ಬನ್ನಿ ಜನರನ್ನು ಕಾಣುವಿರಂತೆ.

ಶ್ರೀ ಸಿದ್ಧರಾಮಯ್ಯ : ಎಷ್ಟು ಸಾರಿ ಹೋಗಿ ಬಂದಿದ್ದೇವೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಈಗ ಹೋಗಿ ಗೊತ್ತಾಗುತ್ತದೆ. ಕಾವೇರಿ ಹಾಳು ಮಾಡಿದ್ದು ಆಯಿತು. ಕಾವೇರಿ ಬೇಸಿನ್ ಜನರನ್ನು ನಿರ್ನಾಮ ಮಾಡಿದ್ದು ಆಯಿತು. ನಿಮ್ಮ ಕುರ್ಚಿ ಉಳಿಯುವುದಕ್ಕೋಸ್ಕರ ಕಾವೇರಿ ಬೇಸಿನ್ನಲ್ಲಿರತಕ್ಕ ಜನರಿಗೆ ದ್ರೋಹ ಮಾಡುವಂತಹ ಕೆಲಸ ಮಾಡುತ್ತಿದ್ದೀರಿ?

ಶ್ರೀ ಸಿದ್ಧರಾಮಯ್ಯ : ಈ ರಾಜ್ಯದ ಜನರಿಗೆ ಯಾವ ಕಾರಣಕ್ಕೂ ಕೂಡ ಅಧಿಕಾರಕ್ಕೋಸ್ಕರ ದ್ರೋಹ ಮಾಡುವ ಪ್ರಶ್ನೆ ಇಲ್ಲ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ನಿಮಗೆ ಮುಖ್ಯಮಂತ್ರಿಗಳಿಗೆ ಕುರ್ಚಿ ಮುಖ್ಯ ಆಯಿತು.

ಶ್ರೀ ಸಿದ್ಧರಾಮಯ್ಯ : ನಿಮಗೆ ಅಧಿಕಾರದ ಹುಚ್ಚು ಇರಬಹುದು, ನಮಗಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಜನ ಹಿತ ನಿಮಗೆ ಬೇಕಾಗಿಲ್ಲ. ಬನ್ನಿ ಈ ಇಶ್ಯೂ ತೆಗೆದುಕೊಂಡು ಹೋಗೋಣ.

ಶ್ರೀ ಸಿದ್ಧರಾಮಯ್ಯ : ಹೋಗೋಣ ಬನ್ನಿ. ಎಷ್ಟು ಸಾರಿ ಹೋಗಿ ಬರುವುದು? ಹೋಗಿ ಬಂದಿದ್ದೇವೆ. ಪಾರ್ಲಿಮೆಂಟಿಗೆ ಹೋಗಿದ್ದೆವು. ಪಂಚಾಯತಿ ಎಲೆಕ್ಷನ್ನಲ್ಲಿ ಹೋಗಿದ್ದೆವು.

ಶ್ರೀ ಬಿ.ಎಸ್. ಯಡಿಯೂರಪ್ಪ : ಕಾವೇರಿ ಕೃಷ್ಣಾ ವ್ಯವಹಾರದಲ್ಲಿ ರಾಜ್ಯದ ಜನತೆಗೆ ದ್ರೋಹ ಮಾಡಿದ್ದೀರಿ.

(ಭಾರಿ ಗೊಂದಲ)

ಶ್ರೀ ಡಿ.ಟಿ. ಜಯಕುಮಾರ್ : ಕಳೆದ ನಾಲ್ಕು ಸಾರ್ವಜನಿಕ ಚುನಾವಣೆಗಳಲ್ಲಿ ಯಾವ ರೀತಿಯ ತೀರ್ಪು ಬಂದಿದೆಯೆಂಬುದನ್ನು ಸ್ವಲ್ಪ ಯೋಚನೆ ಮಾಡಿ ನೋಡಿ.

ಒಬ್ಬ ಮಾನ್ಯ ಸದಸ್ಯರು : ಸ್ವಾಮಿ, ಆಲಮಟ್ಟಿ ವಿಚಾರವಾಗಿ ಮಾತನಾಡಿ.

ಶ್ರೀ ಎಸ್. ಸುರೇಶ್ ಕುಮಾರ್ : ಕರ್ನಾಟಕ ರಾಜ್ಯದ ಜನತೆಗೆ ಇವೊತ್ತು ಏನು ಅನಿಸಿದೆ ಎಂದರೆ, They are blackmailable commodities. ಆಲಮಟ್ಟಿ ವಿಚಾರವೆಲ್ಲವನ್ನೂ ನೋಡಿದಾಗ, ಎರಡು ತರಹದ ಜನರು either they are purchasable or blackmailable commodities ಎಂದು ಜನರಿಗೆ ಅನ್ನಿಸುವ ರೀತಿಯಲ್ಲಿ ವರ್ತಿಸುತ್ತಿದ್ದಾರೆ.

ಶ್ರೀ ಡಿ.ಟಿ. ಜಯಕುಮಾರ್ : ನಾಲ್ಕು ಸಾರ್ವಜನಿಕ ಚುನಾವಣೆಗಳು ನಡೆದವು, ಜನರು ತೀರ್ಪು ಕೊಟ್ಟಿದ್ದಾರೆ. ಅದರ ಬಗ್ಗೆ ನಿಮಗೆ ಯೋಚನೆ ಮಾಡುವ ಶಕ್ತಿ ಇಲ್ಲವೆಂದು ಕಾಣುತ್ತದೆ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು : ಏನೆಂದು ತೀರ್ಪು ಕೊಟ್ಟರು?

ಶ್ರೀ ಅರಗ ಜ್ಞಾನೇಂದ್ರ : ಸನ್ಮಾನ್ಯ ಅಧ್ಯಕ್ಷರೆ, ಜನರು ತೀರ್ಪು ಕೊಟ್ಟಿದ್ದು, ಕರ್ನಾಟಕವನ್ನು ಮಾರಾಟ ಮಾಡುವುದಕ್ಕಲ್ಲ, ಕರ್ನಾಟಕವನ್ನು ಅಭಿವೃದ್ಧಿ ಮಾಡುವುದಕ್ಕೋಸ್ಕರ ತೀರ್ಪು ಕೊಟ್ಟಿದ್ದುದು.

(ಗೊಂದಲ)

ಶ್ರೀ ಎಸ್. ಕೃಷ್ಣಪ್ಪ : ವಿರೋಧ ಪಕ್ಷದ ನಾಯಕರಾದ ಯಡಿಯೂರಪ್ಪನವರು ಈ ಕುರ್ಚಿಗೆ ಆಸೆ ಪಟ್ಟಿದ್ದಾರೆ. ಬಹುಶಃ ಆ ಕುರ್ಚಿ ಈಗ ಉಳಿಯುತ್ತದೆಯೋ ಇಲ್ಲವೋ ಎನ್ನುವ ಅನುಮಾನ ಬಂದಿದೆ. ಆದರೆ, ಕಾಂಗ್ರೆಸ್ಸಿನವರು ತಯಾರಾಗಿದ್ದಾರೆ. ಅವರು ಈ ತರಹ ಏಕೆ ಆಸೆ ಪಡುತ್ತಾರೆ?

ಶ್ರೀ ಬಿ.ಬಿ. ಚಿಮ್ಮನಕಟ್ಟಿ : ಅಲ್ಲ, ನಿಮ್ಮ ಕುರ್ಚಿಯನ್ನು ಉಳಿಸುವುದಕ್ಕೆ ಮಾಡುತ್ತಿರುವುದು.

ಶ್ರೀ ಆಯನೂರು ಮಂಜುನಾಥ್ : ಇವರಿಗೆ ಹಿಂದೆ son of the soil ಎಂದು ಬಿರುದು ಕೊಟ್ಟಿದ್ದರು. ಆದರೆ, ಈಗ sin of the soil ಎಂದು ಸಾಬೀತಾಗಿದೆ.

(ಗೊಂದಲ)

ಐದು ಚುನಾವಣೆಗಳು ನಡೆದವಲ್ಲಾ, ಈಗ ಜನರು ಏನೆಂದು ತೋರಿಸುತ್ತಾರೆ, ಬನ್ನಿ.

(ಗೊಂದಲ)

ಶ್ರೀ ಎಸ್.ಆರ್. ಲಕ್ಷ್ಮಯ್ಯ : ಮಾನ್ಯ ಅಧ್ಯಕ್ಷರೆ, ನಮ್ಮ ಊರಿನಲ್ಲಿ ಒಂದು ದೇವರು ಇದೆ. ಆ ದೇವರು ಒಬ್ಬ ವ್ಯಕ್ತಿಯ ಮೈಮೇಲೆ ಬಂದಾಗ ಆತನಿಗೆ ಬೇವಿನ ಸೊಪ್ಪು ಕೊಟ್ಟರೆ ಕಚಕಚನೆ ಅಗಿದು ನುಂಗಿಬಿಡುತ್ತಾನೆ. ಈಗ ಇವರ ಸದನದಲ್ಲಿ ಗಲಾಟೆ ಮಾಡುತ್ತಿರುವುದನ್ನು ನೋಡಿದರೆ ಒಂದು ಯಂತ್ರ ತಂದು ಇವರಿಗೆ ಕಟ್ಟಿದರೆ ಸದನದ ಕಲಾಪ ಸುಗಮವಾಗಿ ನಡೆಯುವುದಕ್ಕೆ ಅವಕಾಶವಾಗುತ್ತದೆಂದು ನನ್ನ ಅನಿಸಿಕೆ.

ಶ್ರೀ ಆಯನೂರು ಮಂಜುನಾಥ್ : ಆ ಯಂತ್ರವನ್ನು ಇವರಿಗೇ ಕಟ್ಟಬೇಕು. ಏಕೆಂದರೆ, ಇವರು ಮಾತನಾಡಲು ಎದ್ದು ನಿಂತರೆ ಗಡಗಡ ನಡುಗುತ್ತಾರೆ, ಏನು ಮಾತನಾಡುತ್ತಿದ್ದಾರೆಂದು ಅವರಿಗೆ ಅರ್ಥವಾಗುವುದಿಲ್ಲ. ಅವರು ಹೇಳಿದ ಬೇವಿನ ಸೊಪ್ಪನ್ನು ಅವರ ಕೈಗೆ ಕೊಡಬೇಕು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಶ್ರೀಮಾನ್ ಲಕ್ಷ್ಮಯ್ಯನವರು ಬಹಳ ಹಾಸ್ಯವಾಗಿ ಮಾತನಾಡುತ್ತಾರೆ. ಅವರು ಮಾತನಾಡುತ್ತಾ, ಈ ರೀತಿ ಗಲಾಟೆ ಮಾಡುವವರಿಗೆ ನಾನು ಕೇರಳಕ್ಕೆ ಹೋಗಿ ಮಂತ್ರವಾದಿಯನ್ನು ಕಂಡು ಅವರಿಂದ ಯಂತ್ರ ಮಾಡಿಸಿಕೊಂಡು ಬಂದು ಕಟ್ಟುತ್ತೇನೆ ಎಂದು ಏನು ಹೇಳುತ್ತಿದ್ದಾರೆ, ಅದಕ್ಕೆ ಯಾವುದೇ ಭೂತಗಳು ಬರಬಾರದೆಂದು ನಾವು ಆಗಲೇ ಯಂತ್ರವನ್ನು ಕಟ್ಟಿಕೊಂಡು ಬಿಟ್ಟಿದ್ದೇವೆ. ಭೂತಗಳು ಚೇಷ್ಟೆ ಮಾಡಬಾರದೆಂದು ನಾವು ಯಂತ್ರಗಳನ್ನು ಸಿದ್ಧವಾಗಿಟ್ಟುಕೊಂಡಿದ್ದೇವೆ. ಆದುದರಿಂದ, ಅದರ ಬಗ್ಗೆ ತಲೆ ಕೆಡಿಸಿಕೊಳ್ಳಬೇಕಾಗಿಲ್ಲ.

ಶ್ರೀ ಬಿ. ಸತ್ಯನಾರಾಯಣ : ಅದು ಯಾವುದೆಂದು ಹೇಳಿ?

ಶ್ರೀ ವಾಟಾಳ್ ನಾಗರಾಜ್ : ಹೇಳೋಣ, ಹೇಳಿದರೆ ಯಂತ್ರವನ್ನು ಕಟ್ಟಿಕೊಳ್ಳುತ್ತೀರಾ? ಒಂದು ಯಂತ್ರಕ್ಕೆ ಹತ್ತು ಸಾವಿರ ರೂಪಾಯಿಗಳಾಗುತ್ತದೆ, ಕೊಡುತ್ತೀರಾ? ನನಗೆ ಅಷ್ಟು ಮೊತ್ತದ ಹಣವನ್ನು ಕೊಡುವುದಾದರೆ ಯಾರ್‍ಯಾರಿಗೆ ಯಂತ್ರಗಳು ಬೇಕೋ ಅವರ ಹೆಸರುಗಳನ್ನು ಪಟ್ಟಿ ಮಾಡಿಕೊಡಿ, ನಾನು ಅವರೆಲ್ಲರಿಗೂ ಯಂತ್ರಗಳನ್ನು ಕೊಡುತ್ತೇನೆ. ಮಾನ್ಯ ಅಧ್ಯಕ್ಷರೆ, ಈ ಚರ್ಚೆಯನ್ನು ನಾವು ಬಹಳ ಲಘುವಾಗಿ ತೆಗೆದುಕೊಂಡು ತೀರ್ಮಾನ ಮಾಡತಕ್ಕಂಥಾದ್ದು ಅಲ್ಲ. ಈ ಸದನ ಅತ್ಯಂತ ಪ್ರಾಮುಖ್ಯವಾದುದಾಗಿದ್ದು, ಸದನದ ಕಲಾಪ ನಡೆಯುತ್ತಿದ್ದು ಅನೇಕ ಇಲಾಖೆಗಳ ಬೇಡಿಕೆಗಳ ಬಗ್ಗೆ ಚರ್ಚೆಯಾಗುತ್ತಿರುವಾಗ ದೆಹಲಿಯಲ್ಲಿ ನಮ್ಮ ರಾಜ್ಯದ ಹಿತಕ್ಕೆ ಹೆಜ್ಜೆ ಹೆಜ್ಜೆಗೂ ಧಕ್ಕೆಯಾಗತಕ್ಕಂಥ ರೀತಿಯಲ್ಲಿ ಪರಿಸ್ಥಿತಿಗಳು ಬದಲಾವಣೆಯಾಗುತ್ತಿದೆ. ಮೊದಲನೆಯದಾಗಿ, ಆಲಮಟ್ಟಿ ಅಣೆಕಟ್ಟಿನ ವಿಚಾರವಾಗಿ ಚರ್ಚಿಸಲು ದೆಹಲಿಗೆ ಹೋಗುವಾಗ ಪ್ರಪ್ರಥಮವಾಗಿ ಮುಖ್ಯಮಂತ್ರಿಗಳು ನಮ್ಮನ್ನು ಯಾರನ್ನೂ ಕೂಡ ಗಣನೆಗೆ ತೆಗೆದುಕೊಳ್ಳಲಿಲ್ಲ. ಅಲ್ಲದೆ, ಯಾರನ್ನೂ ಕರೆದು ಮಾತನಾಡತಕ್ಕಂಥ ಸೌಜನ್ಯವನ್ನೂ ಸಹ ಅವರು ತೋರಿಸಲಿಲ್ಲ. ಅವರು ಮುಖ್ಯಮಂತ್ರಿಗಳಾಗಿ ನಮ್ಮ ರಾಜ್ಯದ ಹಿತ ಕಾಪಾಡುವುದಕ್ಕೋಸ್ಕರ ಹೋಗುತ್ತಿದ್ದಾರೆಂದು ತಿಳಿದು ಅದರ ಬಗ್ಗೆ ತಲೆ ಕೆಡಿಸಿಕೊಳ್ಳಲಿಲ್ಲ. ನನ್ನ ಅಭಿಪ್ರಾಯದ ಪ್ರಕಾರ ಮುಖ್ಯಮಂತ್ರಿಗಳು ರಾಜ್ಯ

ಹಿತಕ್ಕಾಗಿಯಾಗಲೀ, ಯಾವುದೇ ದೃಷ್ಟಿಯಿಂದ ನೋಡಿದಾಗ ಆಲಮಟ್ಟಿ ಅಣೆಕಟ್ಟಿನ ವಿಚಾರದ ಬಗ್ಗೆ ಚರ್ಚಿಸಲು ಪ್ರಧಾನಮಂತ್ರಿಗಳು ಕರೆದಿರುವ ಸಭೆಗೆ ಹೋದದ್ದು ಸರಿಯಾದ ರೀತಿಯಲ್ಲ ಎನ್ನುವುದು ಸ್ಪಷ್ಟ. ಇದು ಅತ್ಯಂತ ಅನ್ಯಾಯ ಮತ್ತು ನೋವಿನ ಪ್ರಸಂಗ.

ಇದಾದ ನಂತರ ಇಂದಿನ ಪತ್ರಿಕೆಗಳಲ್ಲಿ ನಾವು ಯಾವುದೇ ಕಾರಣಕ್ಕೂ ಆಲಮಟ್ಟಿ ಅಣೆಕಟ್ಟನ್ನು ಎತ್ತರಗೊಳಿಸುವುದನ್ನು ಬಿಟ್ಟು ಕೊಡುವುದಿಲ್ಲ ಎಂಬುದರ ಬಗ್ಗೆ ದಿಟ್ಟ ನಿಲುವು ತೆಗೆದುಕೊಂಡಿರುವ ಕುರಿತು ಪ್ರಕಟವಾಗಿರುವುದನ್ನು ನೋಡಿದ ತಕ್ಷಣ ನಮಗೆಲ್ಲರಿಗೂ ಬಹಳ ಸಂತೋಷವಾಯಿತು. ಜೆ.ಹೆಚ್. ಪಟೇಲರ ಬಗ್ಗೆ ನನಗೆ ಶಹಭಾಷ್ ಎನಿಸಿತು. ನಂತರ, ಈ ತೀರ್ಮಾನವನ್ನು ನಾಲ್ಕು ರಾಜ್ಯಗಳ ಮುಖ್ಯ ಮಂತ್ರಿಗಳು ಇತ್ಯರ್ಥಗೊಳಿಸುತ್ತಾರೆಂದು ಪತ್ರಿಕೆಗಳಲ್ಲಿ ಪ್ರಕಟವಾಗಿರುವುದನ್ನು ಕಂಡಾಗ ನಮ್ಮ ರಾಜ್ಯಕ್ಕೆ ನಿಜವಾಗಿಯೂ ಅಗೌರವ ಮತ್ತು ರಾಜ್ಯಕ್ಕೆ ಈ ವಿಚಾರದಲ್ಲಿ ಬೆಂಕಿ ಬಿದ್ದಂತಾಗಿದೆ. ನಾನು ಈ ಮಾತನ್ನು ಏಕೆ ಉಪಯೋಗಿಸುತ್ತೇನೆಂದರೆ, ನಿಜವಾಗಿಯೂ ರಾಜ್ಯಕ್ಕೆ ಬೆಂಕಿ ಬಿದ್ದಿದೆ. ಇದನ್ನು ಯಾರೂ ಯಾವ ತರಹ ಬೇಕಾದರೂ ವಿಶ್ಲೇಷಿಸಬಹುದು. ರಾಜ್ಯಕ್ಕೆ ಕೊಟ್ಟಿರುವ ಬಚಾವತ್ ತೀರ್ಪು ಒಂದೆಡೆ ಇರುವಾಗ ನಾಲ್ಕು ರಾಜ್ಯಗಳ ಮುಖ್ಯಮಂತ್ರಿಗಳು ಇಲ್ಲಿಗೆ ಬರಲು ಸಾಧ್ಯವಿಲ್ಲ. ನಾಲ್ಕು ರಾಜ್ಯಗಳ ಮುಖ್ಯಮಂತ್ರಿಗಳನ್ನು ನೇಮಕ ಮಾಡುವುದಕ್ಕೆ ಸಂಯುಕ್ತ ರಂಗದ ಚಾಲನಾ ಸಮಿತಿಗೆ ಅಧಿಕಾರವಿಲ್ಲ. ಸಂಯುಕ್ತ ರಂಗ ಹಲವು ಪಕ್ಷಗಳಿಂದ ಕೂಡಿರುವುದಾಗಿದೆ. ಅದರಲ್ಲಿ ಬೇರೆ ಮಾತಿಲ್ಲ. ಮತ್ತೆ ಸಿಡಿಲು ಬಡಿದಿರುವ ಸಂಗತಿಯೇನೆಂದರೆ, ಒಂಭತ್ತು ಜನ ತಜ್ಞರನ್ನು ನೇಮಿಸಿರುವುದರ ಬಗ್ಗೆಯೂ ನಾನು ಈಗ ಪ್ರಶ್ನಿಸುತ್ತೇನೆ. ಬಚಾವತ್ ತೀರ್ಪು ಈಗ ಉಳಿದಿದೆಯೇ? ಅಥವಾ ಇಲ್ಲವೇ? ಬಚಾವತ್ ತೀರ್ಪನ್ನು ನೀವು ಪುನರ್ ಪರಿಶೀಲಿಸುತ್ತೀರೋ? ಬಚಾವತ್ ತೀರ್ಪು ಏನಾಗಿದೆ? ಈ ಪ್ರಕಾರ ನೀವು ಇದನ್ನು ಒಪ್ಪಿಕೊಳ್ಳುವುದಾದರೆ ಬಚಾವತ್ ತೀರ್ಪು ಇವೊತ್ತಿಗೆ ಮುಗಿಯಿತೆಂದರ್ಥ.

ಈ ತೀರ್ಪಿಗೆ ಇವೊತ್ತು ಯಾವುದೇ ಬೆಲೆ, ಗೌರವ ಇಲ್ಲದಂತಾಗಿದೆ. ಈ ದೃಷ್ಟಿಯಿಂದ ನೋಡಿದಾಗ ನನಗನ್ನಿಸುತ್ತದೆ, ಇಂದಿನ ಪ್ರಧಾನಮಂತ್ರಿಗಳು ಹಿಂದೆ ನಮ್ಮ ರಾಜ್ಯದ ಮುಖ್ಯಮಂತ್ರಿಗಳಾಗಿದ್ದರು, ಈಗ ಕೇಂದ್ರದಲ್ಲಿ ಪ್ರಧಾನಮಂತ್ರಿಗಳಾಗಿದ್ದಾರೆ. ಅವರು ಯಾರ ಒತ್ತಡಕ್ಕೆ ಮಣಿದಿದ್ದಾರೆ? ಯಾವ ವಿಚಾರಕ್ಕೆ ಮಣಿದಿದ್ದಾರೆ? ಯಾವ ವಿಚಾರಕ್ಕೆ ಮಣಿದಿದ್ದಾರೆ? ಒಂಭತ್ತು ಜನ ತಜ್ಞರ ಸಮಿತಿಯನ್ನು ನೇಮಿಸಿರುವುದರ ಬಗ್ಗೆ ನಮ್ಮ ರಾಜ್ಯದ ಮುಖ್ಯಮಂತ್ರಿಗಳು ಸ್ವಾಗತಿಸಿದ್ದಾರೆ. ಇದರಲ್ಲಿ ನಿಜವಾಗಿಯೂ ಮುಖ್ಯಮಂತ್ರಿಗಳು ಯಾವ ಒತ್ತಡಕ್ಕೆ ಮಣಿದಿದ್ದಾರೆ? ನನಗನ್ನಿಸುತ್ತದೆ, ಈ ರಾಜ್ಯದ ಮುಖ್ಯಮಂತ್ರಿಗಳಾಗಿರುವ ಶ್ರೀಮಾನ್ ಜೆ.ಹೆಚ್. ಪಟೇಲರು ಪ್ರಧಾನಮಂತ್ರಿಗಳ ರಬ್ಬರ್ ಸ್ಟಾಂಪೇ? ಅವರು ಈ ರಾಜ್ಯದ ರಬ್ಬರ್ ಸ್ಟಾಂಪೇ? ಪ್ರಧಾನ ಮಂತ್ರಿಗಳು ಹೇಳುವುದನ್ನು ಕೇಳತಕ್ಕಂಥ ಈ ರಾಜ್ಯದ ಒಬ್ಬ ಸೇವಕರೇ? ಇವೊತ್ತು ಪ್ರಧಾನ ಮಂತ್ರಿಗಳು ನೇಮಿಸಿರುವ ಸಮಿತಿಯನ್ನು ಒಪ್ಪಿಕೊಂಡಿರುವುದಲ್ಲದೆ ನಾಲ್ಕು ರಾಜ್ಯಗಳ ಮುಖ್ಯಮಂತ್ರಿಗಳ ಸಭೆಗೂ ಒಪ್ಪಿದ್ದನ್ನು ನೋಡಿದರೆ ಈ ರಾಜ್ಯದ ಹಿತ ಕಾಪಾಡುವುದರಲ್ಲಿ ಮುಖ್ಯಮಂತ್ರಿಗಳಾದ ಜೆ.ಹೆಚ್. ಪಟೇಲರು ನಿಜವಾಗಿಯೂ ಈ ರಾಜ್ಯಕ್ಕೆ ಮಾಡಿರುವ ದೊಡ್ಡ ದ್ರೋಹವೆಂದು ಅತ್ಯಂತ ನೋವಿನಿಂದ ಹೇಳಬೇಕಾಗಿದೆ.

ಇದರಲ್ಲಿ ಬೇರೆ ಮಾತಿಲ್ಲ. ಅವರ ಬಗ್ಗೆ ನನಗೆ ಅಪಾರವಾದ ಗೌರವವಿದೆ. ತಮಗೆ ಮೂಲಭೂತವಾದ ಒಂದು ವಿಚಾರ ಹೇಳುತ್ತಿದ್ದೇನೆ. ಇವೊತ್ತು ರಾಜ್ಯದಲ್ಲಿ ಶಾಸನಸಭೆ ನಡೆಯುತ್ತಿದ್ದು, ನಾಲ್ಕು ರಾಜ್ಯಗಳ ಮುಖ್ಯಮಂತ್ರಿಗಳ ನೇಮಕದ ಪ್ರಶ್ನೆ

ಅಥವಾ ಒಂಭತ್ತು ಜನ ತಜ್ಞರ ನೇಮಕದ ಪ್ರಶ್ನೆ ಬಂದಾಗ ತಾವು ಏನು ಹೇಳಬಹುದಾಗಿತ್ತು? ಇವೊತ್ತು ಶಾಸನಸಭೆ ನಡೆಯುತ್ತಿದ್ದೆ, ಅಲ್ಲಿಗೆ ನಾನು ಹೋಗಿ ಈ ಕುರಿತು ಶಾಸಕರುಗಳನ್ನು ಕೇಳಿ ವಿಚಾರವನ್ನು ಪ್ರಸ್ತಾಪಿಸುತ್ತೇನೆ. ಶಾಸನಸಭೆಯ ತೀರ್ಮಾನ, ಒಪ್ಪಿಗೆ ಇಲ್ಲದೆ ನಾನು ಒಂದು ಅಂಗುಲವೂ ಕಾಲಿಡುವುದಿಲ್ಲವೆಂದು ಹೇಳಿದ್ದರೆ ಸರಿಯಾಗಿರುತ್ತಿತ್ತು. ಆದರೆ, ಅವರು ನಡೆದುಕೊಂಡಿರುವ ರೀತಿ ಶಾಸನಸಭೆಗೆ ಒಂದು ರೀತಿಯಲ್ಲಿ ಹಕ್ಕುಚ್ಯುತಿವೆಸಗಿದಂತಾಗಿದೆ. ಶಾಸನಸಭೆ ನಡೆಯುತ್ತಿರುವಾಗ, ಶಾಸನಸಭೆ ಬೇಕಾಗಿಲ್ಲ, ರಾಜ್ಯದ ಜನತೆ ಬೇಕಾಗಿಲ್ಲ, ವಿರೋಧ ಪಕ್ಷಗಳು ಬೇಕಾಗಿಲ್ಲ, ನಾನೊಬ್ಬನೇ ತೀರ್ಮಾನ ತೆಗೆದುಕೊಳ್ಳುತ್ತೇನೆಂದುಕೊಂಡು ತೀರ್ಮಾನ ಕೈಗೊಂಡಿರುವುದು ನಿಜವಾಗಿಯೂ ಬಹಳ ಅನ್ಯಾಯ ಮಾಡಿದಂತಾಗಿದೆ. ಶಾಸನಸಭೆ ನಡೆಯುತ್ತಿರುವುವಾಗ ಈ ವಿಚಾರವನ್ನು ನಾನು ತಕ್ಷಣ ಒಪ್ಪಿಕೊಳ್ಳುವುದಿಲ್ಲ, ನಾನು ಶಾಸನಸಭೆ ಹೋಗುತ್ತಿರುವುದರಿಂದ ಅಲ್ಲಿ ಶಾಸಕರುಗಳ ಮುಂದೆ ಈ ವಿಚಾರ ಮಂಡಿಸುತ್ತೇನೆ, ತದನಂತರ ಅಲ್ಲಿ ಏನು ತೀರ್ಮಾನವಾಗುತ್ತದೋ ಅದಕ್ಕೆ ನಾನು ಬದ್ಧನಾಗಿರುತ್ತೇನೆಂದು ಅವರು ಹೇಳಿದ್ದರೆ ನನಗನ್ನಿಸುತ್ತಿತ್ತು. ಇದರಿಂದ ನಿಜವಾಗಿಯೂ ಈ ರಾಜ್ಯಕ್ಕೆ ಗೌರವ ಮತ್ತು ಶಕ್ತಿ ಬರುತ್ತಿತ್ತು ಎಂದು.

ಇವತ್ತು ನಮ್ಮ ಶಾಸನ ಸಭೆಯನ್ನು ಮತ್ತು ಜನತೆಯನ್ನು ಕಡೆಗಾಣಿಸಿದ್ದಾರೆ. ಇವರ ನೀತಿಯನ್ನು ನೋಡಿದರೆ ನಮ್ಮ ರಾಜ್ಯಕ್ಕೆ ತೀವ್ರವಾದ ಅನ್ಯಾಯವಾಗಿದೆ. ಅದರಲ್ಲಿ ಬೇರೆ ಅಭಿಪ್ರಾಯವಿಲ್ಲ. ಇದರಿಂದಾಗಿ ಬಚಾವತ್ ತೀರ್ಪು ಛಿದ್ರಛಿದ್ರವಾಗಿಬಿಟ್ಟಿತು. ಅದರ ಬಗ್ಗೆ ಬೇರೆ ಮಾತಿಲ್ಲ ಎನ್ನುವ ಎಚ್ಚರಿಕೆಯನ್ನು ಕೊಡುತ್ತಿದ್ದೇನೆ. ಇವತ್ತು ರಾಜ್ಯದ ಜನತೆಯು ಇದರ ಬಗ್ಗೆ ತೀರ್ಮಾನ ಮಾಡಬೇಕಾಗಿತ್ತು, ಶಾಸನ ಸಭೆಯಲ್ಲೂ ನಮ್ಮ ಹಕ್ಕನ್ನು ಉಳಿಸತಕ್ಕ ಶಕ್ತಿ ಈ ಸರ್ಕಾರಕ್ಕಿಲ್ಲದಂತಾಗಿದೆ. ಹೊರಗಡೆಯೂ ಆ ಶಕ್ತಿ ರಾಜ್ಯ ಸರ್ಕಾರಕ್ಕಿಲ್ಲ. ಮುಖ್ಯಮಂತ್ರಿಗಳಿಗೆ, ಈ ರಾಜ್ಯದವರಾದ ಪ್ರಧಾನಮಂತ್ರಿಯವರಿಗೆ ಇಲ್ಲದಂತಾಗಿದೆ. ನಮ್ಮ ರಾಜ್ಯದಿಂದ ಆಯ್ಕೆಯಾಗಿರುವ ಲೋಕಸಭಾ ಸದಸ್ಯರುಗಳು ಏನು ಮಾಡುತ್ತಿದ್ದಾರೆಂದು ಕೇಳಬಯಸುತ್ತೇನೆ. ಪಾರ್ಲಿಮೆಂಟ್ ಸದಸ್ಯರು ಮತ್ತು ನಮ್ಮ ರಾಜ್ಯದವರಾದ ಕೇಂದ್ರ ಸಚಿವರುಗಳು ನೇರವಾಗಿ ರಾಜೀನಾಮೆಯನ್ನು ಕೊಡಬೇಕಾಗಿತ್ತು. ಇದೇ ಪ್ರಸಂಗ ತಮಿಳುನಾಡಿಗೆ ಇಲ್ಲವೆ ಆಂಧ್ರಕ್ಕಾಗಲಿ ಉಂಟಾಗಿದ್ದರೆ ಆ ರಾಜ್ಯಗಳ ಎಲ್ಲಾ ಪಾರ್ಲಿಮೆಂಟ್ ಸದಸ್ಯರುಗಳು ರಾಜೀನಾಮೆಯನ್ನು ಕೊಟ್ಟು ಹೊರಕ್ಕೆ ಬರುತ್ತಿದ್ದರು. ಈ ರಾಜ್ಯದ ಜನತೆಗೆ ಮಾಡಿರುವ ದೊಡ್ಡ ಮೋಸ, ಪಿತೂರಿ, ಅನ್ಯಾಯ ಇದಾಗಿದೆ.

ಶ್ರೀ ಸಿದ್ಧರಾಮಯ್ಯ : ಮಾನ್ಯ ಅಧ್ಯಕ್ಷರೇ, ಇದೊಂದು ವಿಚಾರವನ್ನು ಬಿಟ್ಟು ಬೆಳಿಗ್ಗೆಯಿಂದ ಬೇರೆ ಇನ್ನೇನಾದರೂ ಮಾತನಾಡಿದ್ದಾರೆಯೇ?

ಶ್ರೀ ಬಿ.ಎಸ್. ಯಡಿಯೂರಪ್ಪ : ಇದೊಂದು ವಿಚಾರವನ್ನು ಬಿಟ್ಟು ಬೇರೆ ವಿಚಾರವನ್ನು ಚರ್ಚೆ ಮಾಡಲು ನಾವು ಸಿದ್ಧರಾಗಿಯೂ ಇಲ್ಲ. ನೀವು ರಾಜೀನಾಮೆಯನ್ನು ಕೊಟ್ಟು ಹೊರಕ್ಕೆ ಬರಬೇಕು ಇಲ್ಲದಿದ್ದರೆ ಆ ಪರಿಣಿತರ ಸಮಿತಿಯು ಇಲ್ಲಿಗೆ ಬರುವುದಕ್ಕೆ ಬಿಡುವುದಿಲ್ಲವೆಂದು ಒಪ್ಪಿಕೊಳ್ಳಬೇಕು. ಅಲ್ಲಿಯುವರೆಗೆ ನಾವು ಬೇರೆ ವಿಚಾರ ಮಾತನಾಡುವುದಿಲ್ಲ.

(ಗೊಂದಲ)

ಶ್ರೀ ಸಿದ್ಧರಾಮಯ್ಯ : ನಾವು ಏತಕ್ಕೆ ರಾಜೀನಾಮೆಯನ್ನು ಕೊಡಬೇಕು? ಕರ್ನಾಟಕದ ಹಿತವನ್ನು ಕಾಪಾಡುತ್ತಿರುವುದಕ್ಕೆ ರಾಜೀನಾಮೆ ಕೊಡಬೇಕೆ? ನೀವು

ರಾಜಕಾರಣ ಮಾಡುತ್ತೀರೆಂದು ರಾಜೀನಾಮೆಯನ್ನು ಕೊಡಬೇಕೆ? ನೀವು ಪ್ರಚಾರಕ್ಕಾಗಿ ರಾಜಕೀಯ ಮಾಡುತ್ತೀರೆಂದು ನಾವು ರಾಜೀನಾಮೆ ಕೊಡಬೇಕೇ? ನಾವು ನಮ್ಮ ನಿಲುವನ್ನು ಅನೇಕ ಬಾರಿ ಸ್ಪಷ್ಟ ಮಾಡಿದ್ದೇವೆ. ಬಚಾವತ್ ತೀರ್ಪಿನ ಆಚೆ ಈಚೆ ಹೋಗತಕ್ಕ ಪ್ರಶ್ನೆಯೇ ಇಲ್ಲ, ಬಚಾವತ್ ತೀರ್ಪೇ ಅಂತಿಮ, ಎರಡೂ ರಾಜ್ಯಗಳು ಅದಕ್ಕೆ ಅನುಗುಣವಾಗಿಯೇ ನಡೆದುಕೊಳ್ಳಬೇಕು. ಅದಕ್ಕೆ ಅನುಗುಣವಾಗಿಯೇ ಎರಡು ರಾಜ್ಯಗಳು ಕೆಲಸ ಮಾಡಬೇಕಾಗುತ್ತದೆ. ಅದನ್ನು ಬಿಟ್ಟು ಬೇರೆ ಮಾಡಲು ಸಾಧ್ಯವಿಲ್ಲ. ಬಚಾವತ್ ತೀರ್ಪಿನಲ್ಲಿ ಯಾವುದೇ ಬದಲಾವಣೆಯನ್ನು ಮಾಡಲು ಸಾಧ್ಯವಿಲ್ಲ. ಅದಕ್ಕೆ ನಿಮ್ಮ ಸರ್ಕಾರ ಒಪ್ಪಿಕೊಳ್ಳುವುದೂ ಇಲ್ಲವೆಂದು ನಮ್ಮ ನಿಲುವನ್ನು ಬಹಳ ಸ್ಪಷ್ಟವಾಗಿ ಹೇಳಿದ್ದೇವೆ. ನೀವು ಕೇಳಿದರೆಂದು ರಾಜೀನಾಮೆಯನ್ನು ಕೊಡಲು ಸಾಧ್ಯವೆ? ನಮ್ಮನ್ನಿಲ್ಲಿ ಕಳಿಸಿರುವವರು ಜನರು, ಯಡಿಯೂರಪ್ಪನವರು ಕೇಳಿದರೆಂದು ನಾವು ರಾಜೀನಾಮೆಯನ್ನು ಕೊಡಲು ಇಲ್ಲಿ ಬಂದಿಲ್ಲ, ಇವರು ಕೇಳಿ ಕೇಳಿದಾಗ ರಾಜೀನಾಮೆಯನ್ನು ಕೊಡಲು ನಾವಿಲ್ಲಿ ಬಂದಿಲ್ಲ. ನಾವೇಕೆ ರಾಜೀನಾಮೆಯನ್ನು ಕೊಡಬೇಕು? ಅಧಿಕಾರವನ್ನು ಮಾಡಿ ಎಂದು ಜನರು ನಮ್ಮನ್ನಿಲ್ಲಿ ಕೂರಿಸಿರುವುದು, ಈ ರಾಜ್ಯದ ಜನರಿಗೆ ಅನ್ಯಾಯವಾಗತಕ್ಕ ಕೆಲಸವನ್ನು ಎಂದೂ ನಮ್ಮ ಜನತಾದಳ ಸರ್ಕಾರ ಮಾಡುವುದಿಲ್ಲ. ರಾಜ್ಯದ ಹಿತವನ್ನು ಬಲಿಕೊಡತಕ್ಕ ಕೆಲಸವೆಂದೂ ನಮ್ಮ ಸರ್ಕಾರ ಮಾಡುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್ : ತಾವು ಪರಿಣಿತರ ಸಮಿತಿಯನ್ನು ಒಪ್ಪಿಕೊಂಡಿರುವುದರಿಂದ ಬಚಾವತ್ ತೀರ್ಪು ಎಲ್ಲಿ ಉಳಿದಿದೆ?

(ಗೊಂದಲ)

ಶ್ರೀ ಸಿದ್ಧರಾಮಯ್ಯ : ಬಚಾವತ್ ತೀರ್ಪೇ ಅಂತಿಮ, ಅದಲ್ಲಿ ನಾವೇನಾದರೂ ಬದಲಾವಣೆ ಮಾಡಿದ್ದೇವೆಯೇ? ಬಚಾವತ್ ತೀರ್ಪೇ ಅಂತಿಮ, ಆಲಮಟ್ಟಿಯ ಕೆಲಸ ಮುಂದುವರೆದುಕೊಂಡು ಹೋಗುತ್ತದೆಂದು ಮೊದಲೇ ಸ್ಪಷ್ಟವಾಗಿ ಹೇಳಿದ್ದೇವೆ. ಕೆಲಸವನ್ನು ನಿಲ್ಲಿಸತಕ್ಕ ಪ್ರಶ್ನೆ ಇಲ್ಲ. ಕಮಿಟಿಯನ್ನು ಮಾಡುವ ಬಗ್ಗೆ ಸಲಹೆ ನೀಡಿದಾಗ ಮಲ್ಲಿಕಾರ್ಜುನ ಖರ್ಗೆಯವರೂ ಇದ್ದರು.

(ಗೊಂದಲ)

ಶ್ರೀ ಎಂ. ಶ್ರೀನಿವಾಸ್ : ತಾವು ಹೇಳುವುದನ್ನು ಒಪ್ಪಿಕೊಳ್ಳುತ್ತೇವೆ. ಕಮಿಟಿಯನ್ನೇಕೆ ಮಾಡಿದರು. ದೆಹಲಿಯಲ್ಲಿ ಕಮಿಟಿ ಮಾಡಿರುವುದನ್ನು ಅವರು ಒಪ್ಪಿಕೊಂಡಿದ್ದಾರಲ್ಲ.

ಶ್ರೀ ಸಿದ್ಧರಾಮಯ್ಯ : ಒಳ್ಳೆಯದಾಗಲಿಕ್ಕೆ.

ಶ್ರೀ ಎಂ. ಶ್ರೀನಿವಾಸ್ : ಆಲಮಟ್ಟಿ ಕೆಲಸವನ್ನು ನಿಲ್ಲಿಸುವುದಿಲ್ಲವೆಂದು ಹೇಳಿದ ಮೇಲೆ ಪರಿಣಿತರ ಸಮಿತಿಯನ್ನು ಮಾಡಿರುವುದನ್ನೇಕೆ ಒಪ್ಪಿಕೊಂಡರು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ಹೇಳುವುದೇನೆಂದರೆ

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ,.....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ದಯಮಾಡಿ ನಾನು ಹೇಳಿದ ಮೇಲೆ ಹೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಉತ್ತರ ಕರ್ನಾಟಕದಿಂದ ಆಯ್ಕೆಯಾಗಿರುವ ನೀವು ಸರ್ಕಾರಕ್ಕೆ ಛೀಮಾರಿಯನ್ನು ಹಾಕಿ ಒಂದು ಕ್ಷಣ ನಾವು ಅಧಿಕಾರದಲ್ಲಿರುವುದಿಲ್ಲವೆಂದು ರಾಜೀನಾಮೆಯನ್ನು ಕೊಡಬೇಕಾಗಿತ್ತು.

ಶ್ರೀ ಸೋಮ್ಲಾನಾಯಕ್ : ಆ ರೀತಿ ಜನರು ನೀವು. ದೇಶದ್ರೋಹಿಗಳು ನೀವು, ಮನೆಗೆ ಬೆಂಕಿಯನ್ನಿಡತಕ್ಕ ಜನರು ನೀವು,

ಶ್ರೀ ಸಿದ್ಧರಾಮಯ್ಯ : ನಿಮ್ಮ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸುತ್ತಿಲ್ಲವೆಂದು ತಾವು ರಾಜೀನಾಮೆಯನ್ನು ಕೊಟ್ಟು ಹೋಗಬೇಕಾಗುತ್ತದೆ. ಪ್ರಜಾಪ್ರಭುತ್ವದಲ್ಲಿ ವಿರೋಧ ಪಕ್ಷದವರಾಗಿ ಎಷ್ಟು ಜವಾಬ್ದಾರಿಯಿಂದ ಕೆಲಸ ಮಾಡಬೇಕೆಂದು ಇದೆ. ನಿಮ್ಮ ಆ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸುತ್ತಿಲ್ಲವೆಂದು ತಾವು ರಾಜೀನಾಮೆಯನ್ನು ಕೊಡಬೇಕು.

+ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪ ಮುಖ್ಯಮಂತ್ರಿಯವರು, ನಾವು ದೆಹಲಿಯ ಸಭೆಗೆ ಹೋಗಿದ್ದು, ಅಲ್ಲಿ ಇದ್ದದ್ದು, ಮುಂತಾದ ವಿಚಾರಗಳ ಬಗ್ಗೆ ಎವಿಡೆನ್ಸ್ ತೆಗೆದುಕೊಂಡು ಹೇಳಿದ್ದಾರೆ. ರಾಜ್ಯದ ಹಿತದೃಷ್ಟಿಯಿಂದ ನಾವು ಅಲ್ಲಿಗೆ ಹೋಗಿದ್ದು, ನಮ್ಮ ವಾದವನ್ನು ಅವರ ಮುಂದಿಟ್ಟಿದ್ದು ಅವರ ಮತ್ತು ನಮ್ಮ ಮಧ್ಯೆ ರಾತ್ರಿ 10.30ರ ವರೆಗೆ ಏನೇನು ಚರ್ಚೆಯಾಯಿತು ಎಂಬ ಬಗ್ಗೆ ಪತ್ರಿಕೆಯಲ್ಲಿ ಬಂದಿದೆ. ಆ ಚರ್ಚೆಯ ನಂತರ ಆದ ಬೆಳವಣಿಗೆಯ ಬಗ್ಗೆ ಇಲ್ಲಿ ಪ್ರಸ್ತಾಪವಾಗಿದೆ. ಆ ಚರ್ಚೆಯ ನಂತರವಾದ ಬೆಳವಣಿಗೆ ರಾಜಕೀಯವಾದಂಥ ಬೆಳವಣಿಗೆ, ಸ್ಟೀರಿಂಗ್ ಕಮಿಟಿ ಮುಂದೆ ಹೋದಾಗ ಅಲ್ಲಿ ಆದಂಥ ಮುಖ್ಯಮಂತ್ರಿಗಳ ಒಂದು ಪ್ಯಾನಲ್ ಆ ಮುಖ್ಯಮಂತ್ರಿಗಳು ಶಿಫಾರಸ್ಸು ಮಾಡಿದ ಪರಿಣಿತರ ಸಮಿತಿ, ಆ ಪರಿಣಿತರ ಸಮಿತಿಗೆ ನಮ್ಮವರು ಸ್ವಾಗತ ಮಾಡಿದ್ದು, ಮುಂತಾದ ಬಗ್ಗೆ ಇಲ್ಲಿ ಪ್ರಶ್ನೆ ಉದ್ಭವವಾಗಿದೆ. ಆಲಮಟ್ಟಿ ಕೆಲಸವನ್ನು ನಿಲ್ಲಿಸತಕ್ಕ ಪ್ರಶ್ನೆಯೇ ಇಲ್ಲ, ಬಚಾವತ್ ತೀರ್ಪನ್ನು ವಯಲೇಟ್ ಮಾಡತಕ್ಕ ಅಂಶವೇ ಇಲ್ಲ, ಅದರ ಪ್ರಕಾರ ಕೆಲಸ ನಿಲ್ಲಿಸದೆ ಮಾಡಿಕೊಂಡು ಹೋಗುತ್ತೇವೆಂದು ಮೊದಲು ಹೇಳಿದ್ದಿರಿ. ಆದರೆ, ದುರ್ದೈವದಿಂದ ಇವತ್ತು ಮುಖ್ಯಮಂತ್ರಿಯವರು ಪರಿಣಿತರ ಸಮಿತಿಯವರೇನು ನಿಷ್ಪಕ್ಷವಾದ ಶಿಫಾರಸನ್ನೇನು ಕೊಡುತ್ತಾರೆ. "I will adhere to that" ಎನ್ನತಕ್ಕ ಮಾತನ್ನು ಹೇಳಿದ್ದಾರೆ. ಇನ್ನೂ ಮುಂದೆ ಹೋಗಿ "to facilitate the Expert Committee, I will stop the work of Almatti" ಎಂದು ಹೇಳಿದ್ದಾರೆ.

ಈ ರೀತಿ ಹೇಳುವುದಕ್ಕೂ ಮೊದಲು, ಆಲಮಟ್ಟಿ ಕೆಲಸವನ್ನು ಯಾವುದೇ ಶಕ್ತಿ ಬಂದರೂ ನಿಲ್ಲಿಸುವುದಿಲ್ಲವೆಂದು ನಮ್ಮ ಮುಂದೆ ಮುಖ್ಯಮಂತ್ರಿಯವರು ಹೇಳಿದ್ದರು. ಆದರೆ ಈಗ ಆ ಸಮಿತಿಯ ರಚನೆಯನ್ನು ಸ್ವಾಗತ ಮಾಡಿದ್ದಾರೆ, ಕೆಲಸವನ್ನು ನಿಲ್ಲಿಸುವುದಾಗಿ ಹೇಳಿದ್ದಾರೆ, ಆ ಸಮಿತಿಯ ಶಿಫಾರಸ್ಸನ್ನು ಒಪ್ಪಿಕೊಳ್ಳುವುದಾಗಿ ಹೇಳಿದ್ದಾರೆ. ಈ ಬಗ್ಗೆ ಇಲ್ಲಿ ಪ್ರಶ್ನೆ ಉದ್ಭವವಾಗಿದೆ. ಆದ್ದರಿಂದ ಪದೇ ಪದೇ ಹಿಂದೆ ಹೇಳಿದ್ದರ ಬಗ್ಗೆ ಡಿಫೆಂಡ್ ಮಾಡಿಕೊಳ್ಳಬೇಡಿ. ಉಪಮುಖ್ಯಮಂತ್ರಿಯವರು ಬಚಾವತ್ ತೀರ್ಪಿಗೆ ಬದ್ಧರಾಗಿದ್ದೇವೆ ಎಂದು ಹೇಳುತ್ತಾರೆ, ಆದರೆ ಮುಖ್ಯಮಂತ್ರಿಯವರು "I will adhere to Expert Committee" ಎಂದು ಹೇಳುತ್ತಾರೆ. ಆದ್ದರಿಂದ ಇವರಲ್ಲಿ ಏನೋ ಸ್ವಲ್ಪ ವ್ಯತ್ಯಾಸವಾಗಿರುವಂತೆ ಕಂಡುಬರುತ್ತದೆ, ತಮ್ಮ ತಮ್ಮಲ್ಲಿ ಏನಾದರೂ ಭಿನ್ನಾಭಿಪ್ರಾಯವಿದ್ದರೆ ದಯಮಾಡಿ ದೂರವಾಣಿ ಮಾಡಿ ತಮ್ಮ ಹೇಳಿಕೆಯ ಬಗ್ಗೆ ಏಕೆ ಈ ರೀತಿ ಮಾಡಿದ್ದೀರೆಂದು ಖಚಿತಪಡಿಸಿಕೊಂಡು ಉತ್ತರವನ್ನು ಕೊಡಿ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಬಹಳ ಜನ ಹಿರಿಯ ಸದಸ್ಯರುಗಳಿದ್ದಾರೆ. ಕಾವೇರಿ ಮತ್ತು ಕೃಷ್ಣಾ ಜಲಾನಯನದ ವಿಚಾರದ ಬಗ್ಗೆಯೇ ಇಲ್ಲಿ ಎಷ್ಟೊಂದು ಸಮಯ ಚರ್ಚೆಯಾಗಿದೆಯೆಂಬುದು ದಾಖಲೆ ತೆಗೆದು ನೋಡಿದರೆ ಗೊತ್ತಾಗುತ್ತದೆ. ಬಚಾವತ್ ತೀರ್ಪಿನ ಬಗ್ಗೆ ನಮ್ಮ ಉಪ ಮುಖ್ಯಮಂತ್ರಿಯವರು ಖಂಡತುಂಡವಾಗಿ ಹೇಳಿದ್ದಾರೆ.

ನಾಳೆ ಮುಖ್ಯಮಂತ್ರಿಯವರು ಬರುತ್ತಾರೆ. ಇವತ್ತು ಮುಖ್ಯವಾಗಿ ಬೇಡಿಕೆಗಳ ಬಗ್ಗೆ ಹಿರಿಯರಾದ ತಮ್ಮಿಂದ ಸಲಹೆಗಳು ಬೇಕಾಗಿದೆ. ಬೇಡಿಕೆಗಳ ಬಗ್ಗೆ ಚರ್ಚೆಯಾಗಬೇಕು, ನಮ್ಮ ಇಲಾಖೆಯಲ್ಲೇನೇನು ಆಗಬೇಕು, ತಾವು ಕೇಳಿರುವುದಕ್ಕೆ ನಾವು ಉತ್ತರವನ್ನು ಕೊಡಬೇಕು, ತಾವು ನೀಡಿದ ಸಲಹೆಯನ್ನು ನಾವು ಅಳವಡಿಸಿಕೊಳ್ಳಬೇಕು ಎನ್ನತಕ್ಕ ವಿಚಾರಧಾರೆಯಲ್ಲಿ ಇಂದು ಇದ್ದೇವೆ. ಹೋದ ವರ್ಷದ ನನ್ನ ಕಹಿ ಅನುಭವವನ್ನು ಹೇಳುವುದಾದರೆ, ಬೇಡಿಕೆಗಳ ಬಗ್ಗೆ ಇಲ್ಲಿ ಸರಿಯಾಗಿ ಚರ್ಚೆಯಾಗಲಿಲ್ಲ, ಕೊನೆಯ ಘಳಿಗೆಯಲ್ಲಿ ಯಾರೂ ಸಲಹೆಗಳನ್ನು ಕೊಡಲಿಲ್ಲ, ಚರ್ಚೆಯಾಗಲಿಲ್ಲ ಎಲ್ಲವೂ ಒಟ್ಟಿಗೆಯೇ ಒಪ್ಪಿಗೆಯನ್ನು ಪಡೆಯಲ್ಪಟ್ಟವು. ದಯಮಾಡಿ ಇಂದು ಬೇಡಿಕೆಗಳ ಬಗ್ಗೆ ಚರ್ಚೆ ಮಾಡಲು ಅವಕಾಶ ಮಾಡಿಕೊಡಿ. ಅನಂತರ ಬೇಕಾಗಿದ್ದರೆ ಅಧ್ಯಕ್ಷರ ಅನುಮತಿಯನ್ನು ಪಡೆದು ವಿಶೇಷವಾಗಿ ಚರ್ಚೆ ಮಾಡಿ. ಇನ್ನು ಮೂರು ದಿವಸಗಳಲ್ಲಿ ಅಧಿವೇಶನದ ಕಾರ್ಯಕಲಾಪಗಳನ್ನು ಮುಗಿಸಬೇಕಾಗಿದೆ. ಇಂಥ ಸಮಯದಲ್ಲಿ ಹಿರಿಯರಾದ ತಾವು ಕಾವೇರಿ, ಕೃಷ್ಣಾದ ಬಗ್ಗೆಯೇ ಮಾತನಾಡುತ್ತಿದ್ದೀರಿ, ಬೇರೆ ವಿಚಾರದ ಬಗ್ಗೆ ಚರ್ಚೆಯೇ ಮಾಡುತ್ತಿಲ್ಲ. ತಾವು ಇದರ ಬಗ್ಗೆ ಸರ್ಕಾರದ ಗಮನವನ್ನು ಸೆಳೆದಿದ್ದೀರಿ, ಮಾನ್ಯ ಉಪ ಮುಖ್ಯಮಂತ್ರಿಯವರು ಉತ್ತರವನ್ನು ಕೊಟ್ಟಿದ್ದಾರೆ, ಹೀಗಿದ್ದರೂ ತಾವು ಅದರ ಬಗ್ಗೆಯೇ ಚರ್ಚೆ ಮಾಡುವುದರಲ್ಲಿ ಅರ್ಥವಿಲ್ಲ. ಆದ್ದರಿಂದ ಕಳಕಳಿಯಿಂದ ಅವರಲ್ಲಿ ಕೇಳಿಕೊಳ್ಳುವುದೇನೆಂದರೆ ಬೇಡಿಕೆಗಳ ಬಗ್ಗೆ ಚರ್ಚೆ ಮಾಡಲು ತಾವು ಅವಕಾಶ ಮಾಡಿಕೊಡಬೇಕು.

ಶ್ರೀ ಡಿ.ಟಿ. ಜಯಕುಮಾರ್ : ಮಾನ್ಯ ಅಧ್ಯಕ್ಷರೆ, ದೇವೇಗೌಡರು ಪ್ರಧಾನಮಂತ್ರಿಯಾಗಿರುವವರೆಗೆ ಕರ್ನಾಟಕಕ್ಕೆ ಯಾವುದೇ ರೀತಿಯಾದ ಧಕ್ಕೆಯಾಗುವುದಿಲ್ಲ. ನೀರಿನ ವಿಚಾರದ ಬಗ್ಗೆ, ರೈತರ ಹಿತಾಸಕ್ತಿಯ ಬಗ್ಗೆ ಯಾರಾದರೂ ಒಬ್ಬರು ವ್ಯಕ್ತಿ ಕರ್ನಾಟಕದವರಿದ್ದರೆ ಅದು ದೇವೇಗೌಡರು ಮಾತ್ರ, ಅವರಿಗಿರುವಷ್ಟು ಹಿತಾಸಕ್ತಿ ಮತ್ಯಾರಿಗೂ ಇಲ್ಲ, ಆದ್ದರಿಂದ ಇದರ ಬಗ್ಗೆ ತಾವುಗಳು ಯಾವುದೇ ರೀತಿ ಅನುಮಾನವನ್ನಿಟ್ಟುಕೊಳ್ಳುವುದು ಬೇಡ. ಯಾರು ಏನೇ ಹೇಳಿದರು ನಮ್ಮ ರಾಜ್ಯಕ್ಕೆ ನೀರಿನ ಬಗ್ಗೆ ಯಾವುದೇ ರೀತಿಯಾದ ಧಕ್ಕೆಯುಂಟಾಗದಂತೆ ಅವರು ನೋಡಿಕೊಳ್ಳುತ್ತಾರೆ. ಅವರ ಮೇಲೆ ನಂಬಿಕೆಯನ್ನಿಡೋಣ. ಅಧಿವೇಶನ ಸುಗಮವಾಗಿ ನಡೆಯಲು ದಯಮಾಡಿ ಅವಕಾಶ ಕೊಡಿ.

ಶ್ರೀ ಎಂ. ಶ್ರೀನಿವಾಸ್ : ಮಾನ್ಯ ತೋಟಗಾರಿಕಾ ಸಚಿವರು, ನೀರಿಲ್ಲದಿದ್ದರೂ ತೋಟವನ್ನು ಬೆಳೆಸತಕ್ಕ ಬಗ್ಗೆ ಮಾತನಾಡಿರುವುದಕ್ಕೆ ಶಹಭಾಷ್‌ಗಿರಿಯನ್ನು ಕೊಡಬಹುದು.

ಶ್ರೀ ಟಿ.ಬಿ. ಜಯಚಂದ್ರ : ಅಧ್ಯಕ್ಷರೆ, ನಿನ್ನೆಯವರೆಗೆ ಅವರು ಹೇಳಿದ್ದರಲ್ಲ ನಂಬಿಕೆ ಇತ್ತು. ಆದರೆ ಈಗ ಆ ನಂಬಿಕೆ ಹೋಗಿದೆ. ಇದನ್ನು ನಂಬಲು ಸಾಧ್ಯವೇ ಇಲ್ಲ.

5.30 ಪಿ.ಎಂ

ಶ್ರೀ ವಾಟಾಳ್‌ನಾಗರಾಜ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಡಿ.ಟಿ. ಜಯಕುಮಾರ್‌ರವರು ನಿನ್ನೆ ಈ ಸದನದಲ್ಲಿ ಇರಲಿಲ್ಲ, ಇವತ್ತು ಬೆಳಿಗ್ಗೆಯೂ ಇರಲಿಲ್ಲ. ಮಾನ್ಯ ಮಂತ್ರಿಗಳು ಏನು ನಡೆದಿದೆ ಎಂದು ಸ್ವಲ್ಪ ತಿಳಿದುಕೊಂಡು ಮಾತನಾಡಬೇಕು. ತಾವು ನಿನ್ನೆ ಸದನದಲ್ಲಿ ಇರಲೇ ಇಲ್ಲ. ಸುಮ್ಮನೆ ಧ್ವನಿಗೂಡಿಸುತ್ತಿದ್ದೀರಿ. ಪಿಟೀಲಿಗೆ ಪಕ್ಕದಲ್ಲಿ ಮತ್ತೊಂದು ಸೇರಿಸಿದಂತೆ ಮಾತನಾಡುತ್ತೀರಿ. ಮಾನ್ಯ ಮಂತ್ರಿಗಳು ನಿನ್ನೆ ಸದನದಲ್ಲಿ ಇರಲಿಲ್ಲ. ಮಾನ್ಯ ಮಂತ್ರಿಗಳು ಎಲ್ಲಿದ್ರಿ?

ಶ್ರೀ ಡಿ.ಟಿ. ಜಯಕುಮಾರ್ : ಹೌದು ನಾನು ಸದನದಲ್ಲಿ ಇರಲಿಲ್ಲ, ಯಾವುದೋ ಫಂಕ್ಷನ್ಗೆ ಹೋಗಿದ್ದೆ.

ಶ್ರೀ ವಾಟಾಳ್ ನಾಗರಾಜ್ : ನಿಮಗೆ ವಿಚಾರ ಗೊತ್ತಿಲ್ಲ. ಸ್ವಲ್ಪ ತಿಳಿದುಕೊಂಡು ಮಾತನಾಡಿ.

ಶ್ರೀ ಡಿ.ಟಿ. ಜಯಕುಮಾರ್ : ನನಗೆ ವಿಷಯ ಗೊತ್ತಿದೆ.

ಶ್ರೀ ವಾಟಾಳ್ ನಾಗರಾಜ್ : ನಿಮಗೆ ವಿಚಾರ ಗೊತ್ತಿಲ್ಲ, ಸಡನ್ನಾಗಿ ಬಂದು ಬಿಡುತ್ತೀರಿ. ಏನೋ ಒಂದು ಹೇಳಿ ಬಿಡುತ್ತೀರಿ. ಮಾನ್ಯ ಅಧ್ಯಕ್ಷರೇ, ಸದನದಲ್ಲೇ ಕುಳಿತುಕೊಳ್ಳುವಂತೆ ಅವರಿಗೆ ಸ್ವಲ್ಪ ಹೇಳಿ. ಮಾನ್ಯ ಮಂತ್ರಿಗಳು ಸದನದಲ್ಲೇ ಕುಳಿತು ಚರ್ಚೆ ಕೇಳಲಿ. ನಮ್ಮ ರಾಜ್ಯಕ್ಕೆ ಅನ್ಯಾಯವಾಗಿರುವುದು ಮಾನ್ಯ ಮಂತ್ರಿಗಳಿಗೆ ಗೊತ್ತಿಲ್ಲದಿದ್ದರೆ ಬೇಕಾದರೆ ನೀವು ಹೊರಗಡೆ ಬನ್ನಿ, ಏನೇನು ನಡೆದಿದೆ ಎಂಬ ಬಗ್ಗೆ ನಾನು ನಿಮಗೆ ಹೇಳುತ್ತೇನೆ.

ಶ್ರೀ ಡಿ.ಟಿ. ಜಯಕುಮಾರ್ : ನೀರಿನ ವಿಚಾರದಲ್ಲಿ ಮಾನ್ಯ ದೇವೇಗೌಡರ ಮೇಲೆ ನಂಬಿಕೆ ಇಡಿ ಎಂದಷ್ಟೇ ನಾನು ಹೇಳಿದೆ.

ಶ್ರೀ ವಾಟಾಳ್ ನಾಗರಾಜ್ :ನೀವು ಹೇಳಿದ್ದುದು ನಾನು ಕೇಳಿದೆ. ನೀವು ಯಾವ್ಯಾವ ಗಳಿಗೆಯಲ್ಲಿ ಯಾವ್ಯಾವ ಲೀಡರ್ ಮೇಲೆ ನಂಬಿಕೆ ಇಡುತ್ತೀರೋ ಗೊತ್ತಿಲ್ಲ. ಮಾನ್ಯ ರಾಮಕೃಷ್ಣ ಹೆಗಡೆಯವರ ಬಗ್ಗೆ ನಂಬಿಕೆ ಇಟ್ಟಿರಿ, ಅವರನ್ನು ಹೊರಗಡೆ ಕಳುಹಿಸಿದಿರಿ. ಇವರನ್ನು ಯಾವಾಗ ಹೊರಗಡೆ ಕಳುಹಿಸುತ್ತೀರೋ? ಮಾನ್ಯ ಪಟೇಲ್‌ರನ್ನು ಯಾವಾಗ ಹೊರಗೆ ಕಳುಹಿಸುತ್ತೀರೋ? ನಿಮ್ಮದೆಲ್ಲಾ ವಿಷಯ ನಮಗೆ ಗೊತ್ತಾಗಿ ಹೋಗಿದೆ. ಇನ್ನೇನು ಬಾಕಿ ಉಳಿದಿರುವುದು?

ಶ್ರೀ ಡಿ.ಟಿ. ಜಯಕುಮಾರ್ : ಆ ಮಾತನ್ನು ವಾಪಸ್ಸು ತೆಗೆದುಕೊಳ್ಳಬೇಕು.

ಶ್ರೀ ವಾಟಾಳ್ ನಾಗರಾಜ್ : ನಾನ್ಯಾಕೆ ಆ ಮಾತನ್ನು ವಾಪಸ್ಸು ತೆಗೆದುಕೊಳ್ಳಲಿ?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಇದು ಸತ್ಯ, ನಾಳೆ ಮಾನ್ಯ ದೇವೇಗೌಡರಿಗೆ ಅಧಿಕಾರ ಇಲ್ಲದಿದ್ದರೆ ನೀವ್ಯಾರೂ ಅವರ ಮನೆ ಹತ್ತಿರ ಹೋಗುವುದಿಲ್ಲ. ಮಾನ್ಯ ಪಟೇಲ್‌ರಿಗೆ ಅಧಿಕಾರ ಇಲ್ಲದಿದ್ದರೆ ನೀವ್ಯಾರೂ ಅವರ ಮನೆ ಹತ್ತಿರಕ್ಕೆ ಹೋಗುವುದಿಲ್ಲ. ಹೊಸ ನಾಯಕರನ್ನು ಹುಡುಕಿಕೊಂಡು ಹೋಗುತ್ತೀರಿ. ಮಾನ್ಯ ಸಿದ್ಧರಾಮಯ್ಯನವರೇ, ನೀವು ಸ್ವಲ್ಪ ಅವರನ್ನು ನಂಬಿಕೊಂಡು ಇದ್ದೀರಿ, ನೀವು ಹುಷಾರಾಗಿರಿ, ನಾಳೆ ಇವರು ಎಲ್ಲರಿಗೂ ನಾಮ ಇಡುತ್ತಾರೆ, ಇವರು ಅಷ್ಟೂ ಜನ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು : ನಮಗೆ ನಿಮ್ಮಿಂದ ಬುದ್ಧಿ ಹೇಳಿಸಿಕೊಳ್ಳುವ ಅಗತ್ಯ ಇಲ್ಲ. ನಮಗೆ ಹಿಂದು ಮುಂದು ಯಾರೂ ಇಲ್ಲ. ನೀವು ಒಬ್ಬಂಟಿಗರು. ಹೇಗೆ ಬೇಕಾದರೂ ಮಾತನಾಡುತ್ತೀರಿ. ನಾವು ಯಾರಿಂದಲೂ ಬುದ್ಧಿ ಕಲಿತುಕೊಂಡು ನಾಯಕರ ಹಿಂದೆ ಹೋಗುವ ಜನ ಅಲ್ಲ. ನಾವು ಒಂದೇ ಕಡೆ, ಒಂದು ಪಕ್ಷದಲ್ಲಿ ಇರತಕ್ಕಂತಹ ಜನ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ನಮ್ಮ ಗುಂಡ್ಲುಪೇಟೆಯ ಶಾಸಕರಾದ ಮಾನ್ಯ ಮಹದೇವ್ ಪ್ರಸಾದ್‌ರವರು ಪ್ರಪ್ರಥಮವಾಗಿ, ನಾವು ಎದ್ದರೆ, ಧರಣಿ ಮಾಡುತ್ತೇವೆ ಎನ್ನುತ್ತಾರೆ. ನಾನು ಎದ್ದು ನಿಂತಿದ್ದೇನೆ, ಅವರು ಧರಣಿಗೆ ಬರಲಿ. ನಾವು ಎದ್ದರೆ ಧರಣಿ ಮಾಡುತ್ತೇವೆ. ಎಂದು ನೀವು ಹೇಳಿದರಲ್ಲ. ನೀವು ಧರಣಿ ಮಾಡುವುದಿಲ್ಲ ಎಂದರೆ ನಾನು ಕುಳಿತುಕೊಳ್ಳುತ್ತೇನೆ.

ಮಾನ್ಯ ಸದಸ್ಯರು : ಮಾನ್ಯ ವಾಟಾಳ್ ನಾಗರಾಜ್‌ರವರಿಗೆ ಯಾವಾಗಲೂ ನೆಲ ಹಿಡಿದು ಧರಣಿ ಕೂರುವುದೇ ಕೆಲಸವಾಗಿದೆ.

(ಗೊಂದಲ)

+ ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೇ, ಕ್ಷಮಿಸಿ, ಈಗ ಮಾನ್ಯ ಎಸ್.ಎಸ್. ಪಾಟೀಲ್‌ರವರು ಹೇಳಿದ ಪ್ರಕಾರ ಏನಾದರೂ ಸಮಯ ಕಳೆಯಲಿಕ್ಕೆ ನಾವು ಬಂದವರಲ್ಲ. ಬೇಡಿಕೆಗಳ ಬಗ್ಗೆ ಈ ಸದನದಲ್ಲಿ ಚರ್ಚೆಯಾಗಬೇಕು, ಅದನ್ನು ನಾವು ಒಪ್ಪುತ್ತೇವೆ. ಅದಕ್ಕೂ ನಾವಿಲ್ಲಿ ಸಹಕಾರ ಕೊಡುತ್ತೇವೆ. ಆದರೆ ನಿನ್ನೆ ಮತ್ತು ಇವತ್ತು ನಡೆದಂತಹ ವಿದ್ಯಮಾನ ಯಾವುದಿದೆ, ಅದು ನಾಳೆಗೆ ಚರ್ಚೆ ಮಾಡಲಿಕ್ಕೆ ಇರುತ್ತದೆಯೇ? ಎಂಬುದು ನನ್ನ ಪ್ರಶ್ನೆ. ಇವತ್ತು ನಾವು ಇದನ್ನು ದೇಶದ ಗಮನಕ್ಕೆ ತರದಿದ್ದರೆ, ಈ ಪ್ರಶ್ನೆಯನ್ನು ಬರೀ ರಾಜಕೀಯವಾಗಿ ನಾವು ಎತ್ತಿಕೊಳ್ಳತಕ್ಕಂಥಾದ್ದು ಆಗುತ್ತದೆ. ಅಲ್ಲಿಗೆ ಪರಿಹಾರ ಆಗುವುದಿದ್ದರೆ ನಾವು ಮಾತನಾಡುವ ಚಟಕ್ಕೆ ಮಾತನಾಡೋಣ, ತಾವೂ ಮಾತನಾಡುವ ಚಟಕ್ಕೆ ಮಾತನಾಡಿ. ಬಹಳ ಸಲೀಸಾಗಿ ಹಗುರವಾಗಿ ತೆಗೆದುಕೊಂಡು ಕುಳಿತುಕೊಳ್ಳಬಹುದು, ಪ್ರಶ್ನೆ ನಾಳೆಗೆ ಎಷ್ಟು ಉಳಿಯುತ್ತದೆ ಎಂದು.

ನಾಳೆ ಏನಾದರೂ ಇದು ಪರಿಹಾರ ಆಗುವುದಿದ್ದರೆ ಅಥವಾ ಇನ್ನೊಂದು ವಾರ ಈ ವಿಚಾರ ಪರಿಹಾರ ಆಗುವುದಿದ್ದರೆ. ತಾವು ಹೇಳತಕ್ಕದ್ದನ್ನು ಕೇಳಿ ನಾವು ಕುಳಿತುಕೊಳ್ಳುತ್ತೇವೆ. ಇದು ನಿಮಿಷ ನಿಮಿಷಕ್ಕೂ ಕೂಡ ಬದಲಾವಣೆಯಾಗುತ್ತಿದೆ. ಇದರಿಂದ ಒಂದು ಪರಿಣಾಮ, ಯಾವ ರೀತಿಯಲ್ಲಿ ಗಂಭೀರವಾದಂತಹ ಸ್ವರೂಪವನ್ನು ತಾಳುತ್ತದೋ ಎಂಬ ಬಗ್ಗೆ ವಿಚಾರ ಮಾಡಬೇಕು ಎಂದು ಮನವರಿಕೆ ಮಾಡಿಕೊಳ್ಳಲಿಕ್ಕೆ ನಾವಿಲ್ಲಿ • ಎದ್ದು ನಿಂತಿದ್ದೇವೆ, ಬೇರೆ ಏನೂ ಇಲ್ಲ. ಆದರೆ ಇದನ್ನು • ತಾವು ದಯಮಾಡಿ ಆ ದೃಷ್ಟಿಯಲ್ಲಿ ತೆಗೆದುಕೊಳ್ಳಬೇಕು. ಏಕೆಂದರೆ ನಿನ್ನೆ ಇವತ್ತು ಪತ್ರಿಕೆಗಳಲ್ಲಿ ಬಂದಿರುವುದನ್ನು ತಾವು ನೋಡಿ. ನಿನ್ನೆಯಿಂದ ಇವತ್ತಿಗೆ ಬದಲಾವಣೆಯಾಗಿದೆ. ಇವತ್ತಿನಿಂದ ನಾಳೆಗೆ ಬದಲಾವಣೆಯಾಗುತ್ತದೆ. ನಿಮಿಷ ನಿಮಿಷಕ್ಕೂ ಕೂಡ ದೆಹಲಿಯಲ್ಲಿ ಆಲಮಟ್ಟಿ ವಿವಾದದ ಬಗ್ಗೆ ಬದಲಾವಣೆ ಆಗುತ್ತಿದೆ. ಹೌದು ನಾನು ಒಪ್ಪುತ್ತೇನೆ, ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಮಾನ್ಯ ಮುಖ್ಯ ಮಂತ್ರಿಗಳು ಹೇಳುತ್ತಲೇ

ಇದ್ದಾರೆ, ದೊಡ್ಡ ಧ್ವನಿಯಲ್ಲಿ ಹೇಳುತ್ತಾರೆ, ನಾವು ಅದನ್ನು ಮೆಚ್ಚುತ್ತೇವೆ. ನಾವು ಬಚಾವತ್ ಅವಾರ್ಡ್‌ನಂತೆ ನಡೆಯುತ್ತಿದ್ದೇವೆ,

ಅದರ ಪ್ರಕಾರ ಅನ್ಯಾಯ ಮಾಡಲಿಕ್ಕೆ ಆಗುವುದಿಲ್ಲ ಉಲ್ಲಂಘನೆ ಆಗಲಿಕ್ಕೆ ಬಿಡುವುದಿಲ್ಲ, ನಮ್ಮ ಹಕ್ಕನ್ನು ರಕ್ಷಣೆ ಮಾಡುತ್ತೇವೆ ಎಂದು ಘಂಟಾಘೋಷವಾಗಿ ನೀವು ಹೇಳುತ್ತೀರಿ. ನಿಮ್ಮ ಉದ್ದೇಶದಲ್ಲಿ ನಾವು ತಪ್ಪು ಹುಡುಕುವುದಿಲ್ಲ. ಇವತ್ತು ಸದುದ್ದೇಶದಿಂದಲೇ ಇದನ್ನು ಹೇಳುತ್ತಿದ್ದೀರಿ. ಆದರೆ ನಿಮಗೆ ಸದುದ್ದೇಶ ಇದ್ದರೂ ಕೂಡ ಹೋಗುವಂತಹ ಮಾರ್ಗ, ದಾರಿ, ಯಾವ ಗುರಿಗೆ ಮುಂದೆ ತಲುಪಬಹುದು, ಅದರಿಂದ ಪರಿಣಾಮ ಏನಾಗುತ್ತದೆ. ಘಂಟಾಘೋಷವಾಗಿ ಏನಿವತ್ತು ಹೇಳುತ್ತೀರಿ, ಅದನ್ನು ಸಾಧನೆ ಮಾಡತಕ್ಕ ದಾರಿ ಯಾವುದು? ಅದು ಮುಖ್ಯ ಸಾಧನೆ ಮಾಡತಕ್ಕ ದಾರಿ ಒಂದು ಆದರೆ, ತಾವು ಘಂಟಾಘೋಷವಾಗಿ ಏನು ಹೇಳುತ್ತಿದ್ದೀರಿ, ಅದು ಹಾಗೆಯೇ ಉಳಿಯುತ್ತದೆಯೇ ಹೊರತು ಅದನ್ನು ಸಾಧನೆ ಮಾಡಲಿಕ್ಕೆ ಆಗುವುದಿಲ್ಲ.

I am not doubting. Everybody, including prime Minister, Chief Minster ಎಲ್ಲರಿಗೂ ಕೂಡ ನಮ್ಮ ಕರ್ನಾಟಕ ರಾಜ್ಯದ ಕನ್ನಡ ನಾಡಿನ ಮಣ್ಣಿನನೆಲದಲ್ಲಿ ಹುಟ್ಟಿದಂತಹ ಎಲ್ಲರಿಗೂ ಕೂಡ ಈ ರಾಜ್ಯದ ಹಿತಾಸಕ್ತಿಯನ್ನು ರಕ್ಷಣೆ ಮಾಡತಕ್ಕಂಥದ್ದರಲ್ಲಿ ನಮಗೆ ಯಾವ ಅನುಮಾನ ಕೂಡ ಇರಲಿಲ್ಲ. We are not doubting about that ಆದರೆ ಹೋಗತಕ್ಕ ದಾರಿ ಇವತ್ತು, ದಯಮಾಡಿ ನೋಡಿ. ಡೆಕ್ಕನ್ ಹೆರಾಲ್ಡ್, ಟೈಮ್ಸ್ ಆಫ್ ಇಂಡಿಯಾ ಮುಂತಾದ ಎಲ್ಲಾ ಪತ್ರಿಕೆಗಳನ್ನೂ ನೀವು ನೋಡಿ. ಇವತ್ತು ಯು.ಡಿ.ಎಫ್. ಕಮಿಟಿ I will come to the nuances, ಅದಕ್ಕೆ ಆ ರೀತಿ, ನೀತಿ ಯಾವುದಿದೆ? ಅದು ಎಕ್ಸ್‌ಟ್ರಾ ಕಾನ್ಸಿಟ್ಯೂಷನಲ್ ಅಥಾರಿಟಿ ಆಗಿದೆಯೇ?

ಇಲ್ಲವೇ, ಅದೆಲ್ಲಾ ವಿಚಾರಗಳಿಗೆ ನಾನು ಮತ್ತೆ ಬರುತ್ತೇನೆ. ಈಗ ಪ್ರಶ್ನೆ ಏನೆಂದರೆ, ಬರೀ ವರದಿಗಳನ್ನು ನೋಡಿದ್ದೀರಿ, ಈ ವರದಿಗಳನ್ನು ಇವತ್ತಿನವರೆಗೋ ಯಾರೂ ಕೂಡ ಅಲ್ಲಗಳೆದಿಲ್ಲ. ಈ ವರದಿ ಇದೆ. ಅಲ್ಲಿ ಯು.ಡಿ.ಎಫ್. ಮೀಟಿಂಗ್ ಆಯಿತು. ಐದು ನಿಮಿಷದಲ್ಲಿ ಪರಿಹಾರ ಆಯಿತು ಎಂದು ಮಾನ್ಯ ಜಯಪಾಲರೆಡ್ಡಿಯವರು ಹೇಳಿದ್ದಾರೆ. A matter like Almatti, which are agitating the minds of the people of Karnataka and of Andhra Pradesh, I do not say it is not. And also the people of Maharashtra. A matter which is agitating 30 crores people in the country, the UDF disposes it within five minutes, with the suggestion of the Hon.Prime Minister saying we will constitute a Committee of Chief Ministers. It is disposed. And immediately Mr. Chandrababu Naidu, Chief Minister of Andhra Pradesh, what he says is important.

ಅವರು ಏನು ಹೇಳುತ್ತಾರೆಯೋ ಅದು ಮುಖ್ಯ. All the Chief Ministers will sit in the morning and dispose of it tomorrow they will submit a report. How fast it is going. It is reported. I do not say ನಾವು ನೀವು ಇವತ್ತು ಅದನ್ನು ಅಲ್ಲಗಳೆಯುವುದಕ್ಕೆ ಆಗುವುದಿಲ್ಲ. ಅವರು ಬೆಳಿಗ್ಗೆ ಮೀಟ್ ಮಾಡುತ್ತಾರೆ, ಅವರು ಆಂಧ್ರ ಪ್ರದೇಶ ಹಾಗೂ ಕರ್ನಾಟಕ ಮುಖ್ಯ ಮಂತ್ರಿಗಳೊಂದಿಗೆ ಮಾತನಾಡುತ್ತಾರೆ. ಸಂಜೆಯೊಳಗೆ ರಿಪೋರ್ಟ್ ಕೊಡುತ್ತಾರೆ, ತೀರ್ಮಾನ ಆಗಿ ಬಿಡುತ್ತದೆ. This is the report. Is it not serious? Of course it gets postposed by constituting a

Committee ಆ ಮುಖ್ಯ ಮಂತ್ರಿಗಳಿ ಏನು ಮಾಡಿದರು ಅಂದರೆ, they constituted a committee of experts today. ಇವತ್ತು ರಾತ್ರಿ ಏನಾಗುತ್ತದೆ, ನಾಳೆ ಏನಾಗುತ್ತದೆ ಎಂಬುದನ್ನು ಹೇಳಿಲಿಕ್ಕೆ ಬರುವುದಿಲ್ಲ. because it is moving very fast. ಹೋಗತಕ್ಕಂತಹ ವೇಗದಲ್ಲಿ ನಮ್ಮ ಕರ್ನಾಟಕ ರಾಜ್ಯದ ಹಿತಾಸಕ್ತಿ ಇವತ್ತು ಜರ್ಝರಿತವಾಗಿ ಹೋಗಬಾರದು.

ಅದು ನಿಮ್ಮ ಉದ್ದೇಶ, ನಮ್ಮ ಉದ್ದೇಶವೂ ಸಹ. ನಿಮ್ಮ ಉದ್ದೇಶಕ್ಕೆ ವಿರುದ್ಧವಾಗಿ ನಾವು ಮಾತನಾಡುತ್ತಿಲ್ಲ. ಮಾನ್ಯ ಅಧ್ಯಕ್ಷರೇ, ಈ ಬದಲಾವಣೆಗಳು ಅಷ್ಟು ಕ್ಷಿಪ್ರವಾಗಿ ಇವತ್ತು ಹೋಗುತ್ತವೆ. He hails the decision. He says the Chief Ministers Committee is expected to come out with a finding by tomorrow evening. By this morning. But for the constitution of the Committee they would have come out with the report. ಇದು ಏನು ಆತಂಕದ ವಿಚಾರವಲ್ಲವೇ? ಏನು ಅನೇಕ ವರ್ಷಗಳಿಂದ ಇದ್ದಂತಹ ಒಂದು ವಿವಾದ ...ಬಚಾವತ್ ಅವಾರ್ಡ್ ಕೂಡ ನಮಗೆ ಘೋರ ಅನ್ಯಾಯ ಮಾಡಿದೆ. ಆಗಿನ ಆಂಧ್ರಪ್ರದೇಶದ ನೀರಾವರಿ ಸಚಿವರು ನಾಗಾರ್ಜುನ ಸಾಗರ ಎಲ್ಲಾ ಆದ ಮೇಲೆ, after utilising everything, after releasing money to them under the Plan Funds, they constituted it. They knocked away with 800 TMC of water. They are given only 735 TMC. We would have got the maximum; We should have got about 1300 TMC. We have been already deprived of 500 TMC of water. ಹೊರಟು ಹೋಗಿದೆ, As on today we have only utilised 500 TMC of water. 229 ಟಿ.ಎಂ.ಸಿ. ವಾಟರ್ನಲ್ಲಿ 5 ಟಿ.ಎಂ.ಸಿ. ತೆಲುಗು ಗಂಗಾಕ್ಕೆ ಕೊಟ್ಟಿದ್ದಾರೆ

229 TMC we are yet to utilise. We have been left with not even 3 years. After the year 2000, entire thing will go to common pool for re-distribution, re-allocation. This is what is required by the Andhra Pradesh. They want that it should go to common pool for re-allocation tomorrow. They are not happy. They are water hungry. They want to grab our share, share of Maharashtra. They are not prepared. The right thing for the Union Government is I do not blame, after he is prime Minister, immediately Gazette that Part(B), resolve the entire problem.

ಏನು ಆಗುತ್ತದೆ, ಅದರಲ್ಲಿ ಷೇರ್ ಇದೆ, ಪಾರ್ಟ್-ಬಿ ಇದೆ, Notify it. Bring a legislation before the Parliament, according to the Bachawat Commission. Impliment Part-B, their Telugu Ganga would have been clear. Our Almatti dispute would have been clear. Srisailam would have been clear. Jurala would have been clear. Every project would have water. It will redistribute the water among all the three basin States.

ಅದು ಇವತ್ತು ಅವರಿಗೆ ಬೇಕಾಗಿಲ್ಲ. ತೆಲುಗು ಗಂಗಾ ವಿಚಾರ ಇವತ್ತು is there any one word which our Chief Minister is pleading? Or the Hon. Prime Minister has said or Mr. Chandra Babu has said about Telugu Ganga. The

canal which should have carried only 15 TMC of water for the purpose of drinking to Madras City, now intended to carry 400 TMC of water. Is it not to knock away 385 TMC of water, from which source? 800 TMC of water, which is allocated under Part-B, Andhra Pradesh has already accounted to various projects.

ಒಂದು ಹನಿ ನೀರೂ ಅವರಿಗೆ ಉಳಿದಿಲ್ಲ. They cannot afford to have a single project.

ಯಾವ ಬೇಸಿಸ್ ಮೇಲೆ 385 ಟಿ.ಎಂ.ಸಿ. ನೀರು ಬಿಟ್ಟಿದ್ದೀರಿ? Is it knock away from our share? Is there any mention? Are they stopping Telugu Ganga? Let them stop the work first. Let Mr. Chandrababu Naidu be clear and plea if he is not politicising the issue, let him stop the work of Telugu Ganga. Let him stop the work Srisailam canal. Let him stop releasing water from jurala. Let them come with fair hand. Otherwise he is not entitled for any water. ಇದು ಇವತ್ತು ನಡೆಯುತ್ತಿದೆ. ಇದಕ್ಕೆ ಕರ್ನಾಟಕದ ಜನ ಮತ್ತು ನಾವು ಕಣ್ಣು ಮುಚ್ಚಿ ಕುಳಿತುಕೊಳ್ಳಬೇಕೇ? ನಮ್ಮದು ಎಷ್ಟು ಜವಾಬ್ದಾರಿ ಇದೆಯೋ ನಿಮ್ಮದೂ ಅಷ್ಟೇ ಜವಾಬ್ದಾರಿ ಇದೆ. ಕರ್ನಾಟಕದ ಜನ All of us are accountable to the people of Karnataka, not only the Government, after all, that is why we are cooperating with you. ಕಾವೇರಿ ಇಶ್ಯೂ ಬರಲಿ, ತೆಲುಗು ಗಂಗಾ ಬೇಸಿನ್ ಬರಲಿ, ಆಲಮಟ್ಟಿ ಇಶ್ಯೂ ಬರಲಿ. We are here to be behind you. Whatever decision you take, if you want all of us to resign on this issue, we will resign. We are prepared to make any sacrifice.

ಈ ಇಶ್ಯೂ ಎಲ್ಲಿಗೆ ಬಂದಿದೆ, ಇವತ್ತು ಮುಖ್ಯವಾಗಿ ಇದು ಬಹಳ ಕ್ಲಿಯರ್ ಇದೆ. ಮಾನ್ಯ ಮುಖ್ಯ ಮಂತ್ರಿಗಳು ವೆಲ್ಕಮ್ ಮಾಡಿದ್ದಾರೆ. ಬಹಳ ಸ್ಪಷ್ಟವಾಗಿ ಇವತ್ತು ಹೇಳಿದ್ದಾರೆ. He said the work on Almatti dam project would go on schedule. Immediately he said, "...and the stoppage of work might be there. " - A very positive statemenf. Don't think that it is a very vague statement. "Might be there", 'Will be there.' ಸ್ಟಾಪೇಜ್ ಆಫ್ ವರ್ಕ್ ನಾನೇ ಮಾಡುತ್ತೇನೆ ಎಂದು ಹೇಳಿದ್ದಾರೆ. Stoppage of work- one of the members of the Committee Mr. Jyothi Basu, Hon.Chief Minister of West Bengal said that work should stop. Promptly, the reply comes from the Hon.Chief Minister "Might be stopped." "Should stop ", "Might be stopped .: Mr.Chandrababu Naidu wants that. What else than such a synchronisation :Synchronising at what cost? ಇದು ಕರ್ನಾಟಕದ ಹಿತಕ್ಕೆ ಸ್ಪಂಧಿಸೆತಕ್ಕಂತಹ ಮಾತೇ? ಮಾನ್ಯ ಮುಖ್ಯ ಮಂತ್ರಿಗಳು Yes, he asserted. I was very happy about the statement which he issued from Delhi. ಈ ಎಚ್ಚರಿಕೆ ನಾನು ಸದನದಲ್ಲಿ ಕೊಟ್ಟೆ.

ಆಲಮಟ್ಟಿಗೆ ತಾವೆಲ್ಲಾ ಡಿಸ್ಕಷನ್‌ಗೆ ಹೋಗುತ್ತೇವೆಂದು ಹೇಳಿದಾಗ ನಾನು ಇಲ್ಲಿ ಎದ್ದು ನಿಂತು ಹೇಳಿದೆ, "Please boycott that meeting " ಎಂದು. "You will

be trapped." ಆ ಮೀಟಿಂಗ್‌ಗೆ ದಯಮಾಡಿ ಹೋಗಬೇಡಿ. ಇಂತಹ ಮೀಟಿಂಗ್‌ಗಳನ್ನು ಬರೀ ಜನತಾದಳ ಪ್ರಧಾನಿಗಳಿದ್ದಾಗ ಅಲ್ಲ, ಕಾಂಗ್ರೆಸ್ ಪ್ರಧಾನಿಗಳಿದ್ದಾಗಲೂ ಕೂಡ ಇಂತಹ Trap meetings used to happen. It is common to everybody. They used to trap us. Even they wanted to trap me in the Cauvery dispute. They sent a letter. they sent the Hon. Minister for Irrigation. But, I did not budge, because of the interest of the State. I am elected to protect the interest of the State first and then the party is only a means to achieve that. party is not the end for myself. ಮುಖ್ಯ ಮಂತ್ರಿಯಾದವರಿಗೆ, ಅಧಿಕಾರದಲ್ಲಿರುವವರಿಗೆ ಪ್ರಧಾನಿಯಾದವರಿಗೆ ರಾಷ್ಟ್ರದ ಹಿತಾಸಕ್ತಿ ಮೊದಲು.

Next comes my elections to the Legislative Assembly or my catching the power or becoming a Chief Minister or anything. ಈ ದೃಷ್ಟಿಯಿಂದ ಇವತ್ತು ಯಾವುದೇ ಮುಖ್ಯ ಮಂತ್ರಿ ಕೆಲಸ ಮಾಡಬೇಕಾಗುತ್ತದೆ. May be Mr.Deve Gowda is hailing from this State. May be, he is a Prime Minister to-day. But, you cannot expect him to take a view this side or that side. It is for the Chief Minister to assert. I don't blame the Prime Minister. What else he can do putting in that position? He cannot do anything except bound by certain decisions of everybody. ಆದರೆ ಇವತ್ತು ನಮ್ಮ ಮುಖ್ಯಮಂತ್ರಿಯವರು ನಮ್ಮ ಬೌಂಡರಿ, ನಮ್ಮ ನೀರು, ನಮ್ಮ ನೆಲ -ಇದರ ಬಗ್ಗೆ ಕಾಂಪ್ರಮೈಸ್ ಮಾಡತಕ್ಕಂತಹ ಮ್ಯಾಂಡೇಟ್ ಯಾರಿಗೂ ಇಲ್ಲ. You don't have that mandate. I don't have that mandate. Is there any mandate to compromise for the interest of the State? No.

ನಾಳೆ ಮುಖ್ಯಮಂತ್ರಿಗಳಾದ ಜೆ.ಹೆಚ್. ಪಟೇಲರು ಬರಬೇಕು. Sri J.H.Patel, he should boycott the committee. I said 'I will boycott the Committee.' When Mr.Shukla gave a proposal to appoint a committee to regulate the flow of water, I said 'No,' I did not mind I am boycotting that committee. I gave an order in writing to the then Chief Secretary Mr. Lynn that 'You should not participate in that meeting.' I issued the order in writing. I knew the consequences. But, any consequences, you must be prepared to take as Chief Minister, as the Leader of this House. ಇದನ್ನು ಇವತ್ತು ಮಾಡಬೇಕಾಗುತ್ತದೆ. ನಾಳೆ Hon. Chief Minister should come and say that it is not in the interest of the State. He must call a meeting of all people. Then let us meet here, Let us discuss the subject. He should boycott that committee whichever that committee may be. What kind of a commmittee? ಯಾವಾಗಲೂ ಕೂಡ ತಾವು ದಯಮಾಡಿ ಇರಿಗೇಷನ್ ಎಕ್ಸಪರ್ಟ್ ಹತ್ತಿರ ಕೇಳಿ. Do you expect any justice from any committee constituted predominantly by the riparian States? West Bengal is a riparian State. Tamil Nadu is a riparian State. if they agree for any proposal which goes impartial, even then, they will always think of their

projects. They will think of protecting the right of a riparian State and no Chief Minister, if he wants to be impartial, I will rather give call to Mr. Jyothi Basu and Mr. Karunanidhi to resign straightaway.

I don't expect any justice from them. They will always protect the lower riparian right. They cannot be the committee at all. Assam Chief Minister, he has no side either upper riparian or lower riparian. They have plenty of water. They don't need water dispute to be fair. Bihar, they don't need. Dominant people like Mr. Karunanidhi and Mr. Jyothi Basu will not give justice to you. They will give justice, because they belong to the riparian State. That is another point. ಮಾನ್ಯ ಅಧ್ಯಕ್ಷರೇ, ಈಗ ಕಮಿಟಿ ವಿಚಾರಕ್ಕೆ ಬರೋಣ. ಇದರಲ್ಲಿ ಪೂರ್ವಾಗ್ರಹ ಪ್ರಶ್ನೆ ಇಲ್ಲ. One more question, I am telling you. It is an extra constitutional authority which the Hon. Prime Minister has exercised. He is not entitled to do. Instead of the UD meeting itself deciding, they could have at the most recommended to the Hon. Prime Minister to take up this matter in the Cabinet Comittee and also the Political Affairs Committee of the cabinet. Political Affairs Committee of the Cabinet should have recommended to the Cabinet They could have decided on this. But, UD decides about it, give the report tommorrow. Even the expert committee constituted by whom? Not by the government, not by the cabinet, not by the parliamentary affairs co Committee of the cabinet. Here it is there. ದಯಮಾಡಿ ನೋಡಿ. "The Panel of Chief Ministers constituted to adjudicate the dispute between the Andhra Pradesh and Karnataka over the controversial Almatti isue to-day decided..."

They decided.

"... to constitute a 9-member committee of engineering experts in an effort to address the main stumbling block to the solution."

It is the UD which constituted the committee offthe Chief Minister. The Committee of the Chief Ministers constituted this expert committee. Who are they? And they have to submit a report. CMs' panel in turn will submit a report to the United Front Steering Committee. Expert Committee constituted by the Chief Ministers' panel, Chief Ministers' panel will submit the report to the steeting Committee of the UD. Is there governance in the national level? Should they not work within the framework of the Constitution? If all these disputes between the inter-states asre the subjects which have to be discussed, it is in various forums constituted by the Constitution. Constitution

has been given go by. The government of the State/Nation could be given a go by, how is it binding on the State government? How is it binding on the people of Karnataka? It cannot be binding on them. The expert committee, from whom? Who are the expert committee?

It is a gross exercise of an unconstitutional authoriting operating which will be parallel, which is operating, which has not been heard in the history of this great nation. If the democracy, which has to function under the framework of the Constitution, does not function, we cannot agree with that committee. That is why, even if you don't boycott, the people of that area will boycott, we will boycott. And out Hon. Chief Minister, what he says? He presumes that it is an impartial report. He presumes even before they could get into the job.

He says "We will adhere to the impartial recommendations of the experts committe" So, he presumes that is is impartial. So, this is a total sell-out of the interest of the State, total sell-out of the almatti issue. ಇದರ ಬಗ್ಗೆ ತಾವು If you want politically to give a reply, you give a political reply and if you want it to be political, if you think that it is a political weapon to sustain in the State level, you say so and you give by that. We will not agree for this. This is a total sell-out and this is surrendering the interest of the State. You have done it while constituting the Cauvery Tribunal. Yo abdicated the power of Govt. of India asking the Govt. of India in 1989 just to sustain the governemnt, just to get the support of Mr. Karunanidhi and constituted the Cauvery Tribunal and got into this kind of a mess. ಆದ್ದರಿಂದ, ಮಾನ್ಯ ಅಧ್ಯಕ್ಷರೇ, ಇದು ಬಹಳ ಮುಖ್ಯವಾದ ವಿಚಾರ. ಇದು ಪರಿಹಾರ ಆಗದೆ ತಾವು ದಯಮಾಡಿ ಬೇರೆ ವಿಚಾರ ತೆಗೆದುಕೊಳ್ಳಬೇಡಿ.

It doesn't matter if you continue the session for another 10 days or 15 days or whatever it may be. But what is the moral thing, if a panel of chief ministers give a report, experts give a report and it comes out? What will happen? It will annul the very letter and spirit of the Bachawat Commission. Public in the country will get an impression that Karnataka is most unreasonable. Even in Cauvery basin, Tamil-Nadu has been cultivating 40 lakh acres, whereas we are in a position to cultivate only 11 lakh acres although 75% of the area is drought prone in the Cauvery basin.

ಇವೊತ್ತು ನಿಮ್ಮ ಆಲಮಟ್ಟಿ ಡ್ಯಾಂ ಬರದಿದ್ದರೆ ಬಿಜಾಪುರ, ಗುಲ್ಬರ್ಗಾ, ರಾಯಚೂರ್ ಈ ಭಾಗದ ಜನರಿಗೆ ನೀರು ಎಲ್ಲಿರುತ್ತದೆ? ನಿಮ್ಮ ಸ್ಟೇಜ್ 2 ಎಲ್ಲಿರುತ್ತದೆ? ಪವರ್ ಪ್ರಾಜೆಕಟ್ಸ್ ಎಲ್ಲಿರುತ್ತದೆ? the right courrse for the Union

Government is to tell Mr.. Chandrababu Naidu that law will take its own course and the respective Chief ministers may settle the matter. This is the only option available. there is no other option. But resorting to the third method of constituting an extra-constitutional authority and imposing a kind of decision on the people of Karnataka, we will resist it at any cost.

+ಶ್ರೀ ಸಿದ್ಧರಾಮಯ್ಯ : ಮಾನ್ಯ ಅಧ್ಯಕ್ಷರೇ, ನಿನ್ನೆಯಿಂದ ಇವತ್ತು ಬೆಳಿಗ್ಗೆಯಿಂದ ಇದನ್ನೇ ಚರ್ಚೆ ಮಾಡಿದ್ದೇವೆ. ಮಾನ್ಯ ವಿರೋಧಪಕ್ಷದ ಸದಸ್ಯರು ಮತ್ತು ನಾಯಕರು ಏನು ಸಂಶಯವನ್ನು ಇಟ್ಟುಕೊಂಡಿದ್ದಾರೆ. ಇಲ್ಲಿ ನಮ್ಮ ರಾಜ್ಯದ ಮುಖ್ಯಮಂತ್ರಿಗಳು ದೆಹಲಿಯಲ್ಲಿ ನಿನ್ನೆ ಮತ್ತು ಇವೊತ್ತು ಹೇಳಿರತಕ್ಕಂಥದ್ದು ಎಲ್ಲೂ ಕೂಡ ಬಚಾವತ್ ತೀರ್ಪಿನ ಬಗ್ಗೆ ಚರ್ಚೆ ಮಾಡತಕ್ಕಂಥ ಪ್ರಶ್ನೆ ಇಲ್ಲವೇ ಇಲ್ಲ. ಅದೇ ಅಂತಿಮ, ಅದರಲ್ಲಿ ಯಾವುದೇ ಬದಲಾವಣೆ ಮಾಡತಕ್ಕಂಥ ಪ್ರಶ್ನೆ ಇಲ್ಲ. ಅದನ್ನು ಆಂಧ್ರದವರೂ ಕೇಳಲಿಕ್ಕೆ ಆಗುವುದಿಲ್ಲ. ಅದನ್ನು ಕೇಳಿದರೆ ಅದನ್ನು ಕಾನೂನು ಪ್ರಕಾರವಾಗಿ ಮಾಡುವುದಕ್ಕೆ ಸಾಧ್ಯವೂ ಇಲ್ಲ, ಯಾವ ರಾಜ್ಯ ಕೂಡ ಒಪ್ಪಲಿಕ್ಕೆ ಸಾಧ್ಯವಿಲ್ಲ. ಮಾನ್ಯ ಪ್ರಧಾನ ಮಂತ್ರಿಗಳು ಕರೆದಿರುವಂಥ ಸಭೆಯ ನಮ್ಮ ಮುಖ್ಯಮಂತ್ರಿಗಳು ನಮ್ಮ ನಿಲುವನ್ನು ಬಹಳ ಸ್ಪಷ್ಟವಾಗಿ ಸ್ಪಷ್ಟಪಡಿಸಿದ್ದಾರೆ. ಆ ಸಭೆಯ ಮಾನ್ಯ ಖರ್ಗೆಯವರೂ ಇದ್ದರು, ಮಾನ್ಯ ಹೆಚ್.ಕೆ. ಪಾಟೀಲರೂ ಇದ್ದರು. ಆ ಸಂದರ್ಭದಲ್ಲೇ ಪ್ರಧಾನ ಮಂತ್ರಿಗಳು ಈ ತರಹದ ಸೂಚನೆಯನ್ನು ಹೇಳಿದ್ದರು. ಒಂದು ಸಮಿತಿ; ಏಕೆಂದರೆ ನಾವು ಬಚಾವತ್ ತೀರ್ಪನ್ನು ಉಲ್ಲಂಘನೆ ಮಾಡುತ್ತಿಲ್ಲ. ಬಚಾವತ್ ತೀರ್ಪಿನ ಪ್ರಕಾರವಾಗಿ ಮಾಡುತ್ತಿದ್ದೇವೆ ಎನ್ನತಕ್ಕಂಥದ್ದು ನಮ್ಮ ನಿಲುವು. ಅದರ ಪ್ರಕಾರ ಆಲಮಟ್ಟಿ ಡ್ಯಾಮನ್ನು ಎತ್ತರ ಕೂಡ ಮಾಡುತ್ತಿದ್ದೇವೆ. ಬಚಾವತ್ ತೀರ್ಪಿನ ಪ್ರಕಾರ 729 ಟಿಎಂಸಿ ನೀರಿನ ನಮ್ಮ ಹಕ್ಕು ಏನು ಇದೆ ಅದನ್ನು ಉಳಿಸಿಕೊಳ್ಳುವುದಕ್ಕೆ ನಾವು ನಮ್ಮ ಕೆಲಸಗಳನ್ನು ಮಾಡುತ್ತಿದ್ದೇವೆ,

ಇದರಲ್ಲಿ ಯಾರೇ ಇಂಟರ್‌ಫಿಯರ್ ಆಗಲಿಕ್ಕೆ ಸಾಧ್ಯವಿಲ್ಲ ಎನ್ನತಕ್ಕಂಥ ಮಾತನ್ನು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಈಗ ಇದರಿಂದ ಪರಿಣಾಮಗಳು ಏನಾಗುತ್ತವೆ ಎನ್ನತಕ್ಕಂಥದ್ದು. ನಮ್ಮ ರಾಜ್ಯಕ್ಕೆ ಅನ್ಯಾಯ ಆಗಿಬಿಡುತ್ತದೆ. ನಮ್ಮ ರಾಜ್ಯದ ಹಿತವನ್ನು ಬಲಿಕೊಡುತ್ತಿದ್ದೇವೆ ಎಂದು ತಾವೇನು ಮನಸ್ಸಿನಲ್ಲಿ ಆತಂಕ ಇಟ್ಟುಕೊಂಡಿದ್ದೀರಿ ಆ ಆತಂಕಕ್ಕೆ ಆಸ್ಪದ ಆಗುವ ರೀತಿಯಲ್ಲಿ ಇಲ್ಲಿಯವರೆಗೆ ನಡೆದಿಲ್ಲ. ಆ ತರಹದ ಯಾವುದೇ ಬೆಳವಣಿಗೆ ಕೂಡ ಆಗಿಲ್ಲ, ಅಲ್ಲಿ ಬಚಾವತ್ ತೀರ್ಪು ಬಿಟ್ಟು ಬೇರೆ ವಿಚಾರಗಳನ್ನು ಹೇಳಿದ್ದಾರೆ ಎಂದು ಹೇಳಿದಿರಿ. ಒಂದು ವೇಳೆ ಆ ಸಮಿತಿ ಆದರೂ ಕೂಡ, ಈಗ ಅವರು ಜುರಾಲಾದಲ್ಲಿ ಏನು ಬಚಾವತ್ ತೀರ್ಪಿಗೆ ವಿರುದ್ಧವಾಗಿ ನಡೆದುಕೊಂಡಿದ್ದಾರೆ, ಶ್ರೀ ಶೈಲಂನಲ್ಲಿ ಏನು ವಿರುದ್ಧವಾಗಿ ನಡೆದುಕೊಂಡಿದ್ದಾರೆ, ಅದೇ ರೀತಿ ತೆಲುಗು ಗಂಗಾ ವಿಚಾರದಲ್ಲಿ ಅವರು ವಿರುದ್ಧವಾಗಿ ನಡೆದುಕೊಂಡಿದ್ದಾರೆ, ಅಲ್ಲಿರತಕ್ಕಂಥ ವಿಚಾರ ನೋಡುತ್ತೇವೆ,

ಸನ್ಮಾನ್ಯ ಮೊಯಿಲಿಯವರು ಅದನ್ನೇ ಹೇಳಿದ್ದಾರೆ, ಅವರೇ ಉಲ್ಲಂಘನೆ ಮಾಡಿರೋರು, ಹೆಚ್ಚು ನೀರನ್ನು ಅವರು ಬಳಸಿಕೊಳ್ಳುತ್ತಿದ್ದಾರೆ, ಶ್ರೀಶೈಲಂನಲ್ಲಿ ಅವರು ನೀರು ಬಳಸಿಕೊಳ್ಳತಕ್ಕಂಥ ಕೆಲಸ ಮಾಡುತ್ತಿದ್ದಾರೆ, ಬಚಾವತ್ ತೀರ್ಪಿನ ವಿರುದ್ಧವಾಗಿ

ನಡೆದುಕೊಳ್ಳುತ್ತಿದ್ದಾರೆ, ಜುರಾಲಾದಲ್ಲಿ, ತೆಲಗು ಗಂಗಾದಲ್ಲಿ ವಿರುದ್ಧವಾಗಿ ನಡೆದುಕೊಳ್ಳುತ್ತಿದ್ದಾರೆ ಎನ್ನತಕ್ಕಂಥ ಮಾತನ್ನು ಹೇಳುತ್ತಿದ್ದರು. ನಾವು ಯಾವುತ್ತೂ ಕೂಡ ಬಚಾವತ್ ತೀರ್ಪಿನ ವಿರುದ್ಧವಾಗಿ ನಡೆದುಕೊಳ್ಳತಕ್ಕಂಥ ಕೆಲಸ ಮಾಡಿಲ್ಲ. ಈ ತರಹ ಇರುವಾಗ ನಾವು ಆತಂಕಪಟ್ಟುಕೊಳ್ಳತಕ್ಕಂಥ ಅಗತ್ಯ ಇಲ್ಲ. ಆ ತರಹದ ಸನ್ನಿವೇಶ ನಿರ್ಮಾಣ ಆಗಿಲ್ಲ ಎನ್ನತಕ್ಕಂಥದ್ದನ್ನು ಬಹಳ ಸ್ಪಷ್ಟವಾಗಿ ಹೇಳಲಿಕ್ಕೆ ಬಯಸುತ್ತಿದ್ದೇವೆ. ನಮಗೆ ರಾಜ್ಯದ ಹಿತ ಬಹಳ ಮುಖ್ಯ. ಅದರ ಬಗ್ಗೆ ರಾಜಿ ಆಗತಕ್ಕಂಥ ಪ್ರಶ್ನೆಯೇ ಇಲ್ಲ. ಪ್ರಧಾನ ಮಂತ್ರಿಗಳು ಕೂಡ ಈ ರಾಜ್ಯದವರಾಗಿದ್ದಾರೆ. ಅವರು ಕೂಡ ಕರ್ನಾಟಕ ರಾಜ್ಯದ ಹಿತವನ್ನು ಬಲಿ ಕೊಡತಕ್ಕಂಥ ಪ್ರಶ್ನೆ ಉದ್ಭವ ಆಗುವುದೇ ಇಲ್ಲ. ನಾವೂ ಕೂಡ ಆ ಕೆಲಸ ಮಾಡಲಿಕ್ಕೆ ಹೋಗುವುದಿಲ್ಲ. ಅಧಿಕಾರ ಬರುತ್ತದೆ, ಹೋಗುತ್ತದೆ, ಅಧಿಕಾರ ಶಾಶ್ವತ ಅಲ್ಲ, ಅಧಿಕಾರವನ್ನು ಜನ ಕೊಡೋದು. ಆದರೆ ರಾಜ್ಯದ ಹಿತ ಬಲಿ ಕೊಡತಕ್ಕಂಥ ಕೆಲಸ ಮಾಡುವುದಿಲ್ಲ.

ಶ್ರೀ ಯು.ಆರ್. ಸಭಾಪತಿ : ಅಲ್ಲಿಯವರೆಗೆ ಆಲಮಟ್ಟಿ ಡ್ಯಾಂ ಕೆಲಸ ನಿಲ್ಲಿಸಬೇಕೆಂದು ಹೇಳಿದ್ದಾರೆ.

ಶ್ರೀ ಸಿದ್ಧರಾಮಯ್ಯ : ನಿಲ್ಲಿಸಬೇಕೆಂದು ಎಲ್ಲಿಯೂ ಹೇಳಲಿಲ್ಲ ತಾವು ದಯಮಾಡಿ ಕುಳಿತುಕೊಳ್ಳಿ. ನಿಲ್ಲಿಸುತ್ತೇವೆ ಎಂದು ಎಲ್ಲೂ ಹೇಳಿಲ್ಲ, ಅದನ್ನು ಸರಿಯಾಗಿ ಓದಿ.

ಮಾನ್ಯ ಅಧ್ಯಕ್ಷರೇ, ನಾನು ಕೂಡ ನೀರಾವರಿ ಮಂತ್ರಿಗಳಾದ ನಾಗೇಗೌಡರ ಜೊತೆ ಮಾತನಾಡಿದ್ದೇನೆ, ಅವರು ಎಲ್ಲೂ ಕೂಡ ಕೆಲಸ ನಿಲ್ಲಿಸುತ್ತೇವೆಂದು ಹೇಳಿಲ್ಲ. ಆಲಮಟ್ಟಿಯಲ್ಲಿ ಕೆಲಸ ಮುಂದುವರಿಯುತ್ತದೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ.

SRI M. MALLIKARJUNA KHARGE : The sentence he has said is, "work on the Almatti dam project would go on as per shedule and stoppage of work might be there only to facilitate experts team to carry out the task." ಎಕ್ಸ್‌ಪರ್ಟ್ ಕಮಿಟಿ ಬಂದರೆ, ಅವರಿಗೆ ಸಹಾಯ ಮಾಡುವುದಕ್ಕೋಸ್ಕರ ನಾವು ನಿಲ್ಲಿಸುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ.

ಶ್ರೀ ಸಿದ್ಧರಾಮಯ್ಯ : ಯಾರಿಗೆ ಸಹಾಯ ಮಾಡುವುದು ಯಾರಿಗೆ ಸಹಾಯ ಮಾಡುತ್ತೇವೆ ಎಂದು ಹೇಳಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಎಕ್ಸ್‌ಪರ್ಟ್ ಕಮಿಟಿಗೆ ಟು. ಫೆಸಿಲಿಟೇಟ್.

ಶ್ರೀ ಸಿದ್ಧರಾಮಯ್ಯ : ಫೆಸಿಲಿಟೇಟ್ ಎಂದರೇನು? ಅವರು ಬಂದಾಗ ನೋಡಲಿಕ್ಕೆ. ಮಾನ್ಯ ಅಧ್ಯಕ್ಷರೆ ಅದರ ಪ್ರಕಾರ ನಾನೇನು ಅರ್ಥ ಮಾಡಿಕೊಂಡಿದ್ದೇನೆ ಎಂದರೆ ಒಂದು ವೇಳೆ ಆ ಸಮಿತಿ ಬಂದಾಗ, ನೋಡಲಿಕ್ಕೋಸ್ಕರ ಅವರಿಗೆ ಅನುಕೂಲ ಮಾಡಲಿಕ್ಕೆ ಅಲ್ಲಿ ಪದ ಪದೇ ಹೊರತು, ನಾವು ಕೆಲಸ ನಿಲ್ಲಿಸೇಬಿಡುತ್ತೇವೆಂದು ಎಲ್ಲಿದೆ ಅಲ್ಲಿ?

SRI M. MALLIKARJUNA KHARGE : It is a political committee. Just to politicise they have done it. It is not an expert committee constituted by the cabinet.

ಶ್ರೀ ಸಿದ್ಧರಾಮಯ್ಯ : ನಾವು ಕೆಲಸ ಮುಂದುವರೆಸುತ್ತೇವೆ. ಆ ಸಮಿತಿ ಭೇಟಿ ಕೊಟ್ಟಂಥ ಸಂದರ್ಭದಲ್ಲಿ...

ಶ್ರೀ ಬಿ.ಎಸ್.ಯಡಿಯೂರಪ್ಪ : ಆ ಸಮಿತಿ ಯಾವುದು? ಯಾರು ಅವರು ಬರುವುದಕ್ಕೆ? ಅವರಿಗೆ ಏನು ರೈಟ್ಸ್ ಇದೆ?

ಶ್ರೀ ಸಿದ್ಧರಾಮಯ್ಯ : ಪ್ರಧಾನ ಮಂತ್ರಿಗಳು ಹೇಳಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಎಕ್ಸ್‌ಪರ್ಟ್ ಬರುವುದಕ್ಕೆ? ಅವರು ಯಾರು? ಯಾರು ಅಪ್ಪಣೆ ಕೊಟ್ಟಿದ್ದಾರೆ? ನೀವು ಬಾಯಕಾಟ್ ಮಾಡಬೇಕು. ಅವರಿಗೆ ಬರುವುದಕ್ಕೆ, ಯಾರು ಹೇಳಿದ್ದಾರೆ. ಎಕ್ಸ್‌ಪರ್ಟ್ಸ್ ಕಮಿಟಿಯನ್ನು? ಯಾರು ರಚನೆ ಮಾಡಿದ್ದಾರೆ ಬಚಾವತ್ ಆಯೋಗ ತೀರ್ಪು ಎಂದು ಬಚಾವತ್ ಕಮಿಟಿ ಮಾಡಿದ್ದೀರಾ? ಯಾರು ನಿಮಗೆ ಅಧಿಕಾರ ಕೊಟ್ಟಿದ್ದು?

(ಗೊಂದಲ)

ಶ್ರೀ ಸಿದ್ಧರಾಮಯ್ಯ : ಅವರ ಹತ್ತಿರ ಸಂಪೂರ್ಣ ಮಾಹಿತಿ ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ಆ ಸಮಿತಿಗೆ ಬಹಿಷ್ಕಾರ ಹಾಕಿದ್ದೇವೆ ಎಂದು ಹೇಳಿ.

ಶ್ರೀ ಸಿದ್ಧರಾಮಯ್ಯ : ಪ್ರಧಾನ ಮಂತ್ರಿಗಳು ಈ ಸೂಚನೆಯನ್ನು ಕೊಟ್ಟಿದ್ದರು. ಈ ನಾಲ್ಕು ಜನ ಮುಖ್ಯಮಂತ್ರಿಗಳು, ಬಿಹಾರ್‌ನವರು, ವೆಸ್ಟ್ ಬೆಂಗಾಲ್‌ನವರು ತಮಿಳುನಾಡಿನವರು ಮತ್ತು ಅಸ್ಸಾಂನ ಮುಖ್ಯಮಂತ್ರಿಗಳು ಕೊಟ್ಟಿರತಕ್ಕಂಥ ತೀರ್ಪು ಅಲ್ಲ ಇದು. ಇದು ಪ್ರಧಾನ ಮಂತ್ರಿಗಳು ಸೂಚನೆ ಕೊಟ್ಟಿರುವುದು.

ಶ್ರೀ ಬಿ.ಎಸ್. ಯಡಿಯೂರಪ್ಪ : ಈಗಾಗಲೇ ತೀರ್ಮಾನವಾಗಿರುವ ಬಚಾವತ್ ತೀರ್ಪನ್ನು ಪ್ರಶ್ನೆ ಮಾಡುವುದಕ್ಕೆ ಇವರು ಯಾರು?

ಶ್ರೀ ಸಿದ್ಧರಾಮಯ್ಯ : ಎಲ್ಲಿ ಪ್ರಶ್ನೆ ಮಾಡಿದ್ದಾರೆ?

ಶ್ರೀ ಬಿ.ಎಸ್. ಯಡಿಯೂರಪ್ಪ : ಅವರು ನೋಡುವುದಕ್ಕೆ ಏಕೆ ಬರುತ್ತಿದ್ದಾರೆ?

(ಗೊಂದಲ)

SRI M. MALLKARJUNA KHARGE : Who are they?

ಶ್ರೀ ಸಿದ್ಧರಾಮಯ್ಯ : ಮಾನ್ಯ ಅಧ್ಯಕ್ಷರೇ, ನರಸಿಂಹರಾಯರು ಪ್ರಧಾನಿಯಾಗಿದ್ದಾಗ ಹನ್ನೊಂದು ಟಿಎಂಸಿ ನೀರು ಕೊಡಬೇಕೆಂದು ಸುಪ್ರೀಮ್ ಕೋರ್ಟ್‌ನವರು ಹೇಳಿದಾಗ ನರಸಿಂಹರಾಯರು ಎರಡೂ ರಾಜ್ಯಗಳಲ್ಲಿ ಹೋಗಿ ನೋಡಿಕೊಂಡು ಬನ್ನಿ ಎಂದು ಆಲಘ್ ಕಮಿಟಿ ಕಳುಹಿಸಿದ ತಕ್ಷಣವೇ ಬದಲಾವಣೆ ಆಗಿಬಿಡುತ್ತದೆಯೇ ಅದು? ಅದರ ಸ್ವರೂಪ ಬದಲಾವಣೆ ಆಗಿಬಿಡುತ್ತದೆಯೇ?

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಉಪ ಮುಖ್ಯಮಂತ್ರಿಗಳೇ, ಸುಪ್ರೀಂ ಕೋರ್ಟಿನ ಡೈರೆಕ್ಷನ್ ಮೇಲೆ ಅವರು ಬಂದಿದ್ದು.

ಶ್ರೀ ಸಿದ್ಧರಾಮಯ್ಯ : ನೀವು ಏನೇನೋ ಕಲ್ಪನೆ ಮಾಡಿಕೊಂಡು ರಾಜ್ಯದ ಹಿತ ಹೋಗಿಬಿಡುತ್ತದೆ, ಬಚಾವತ್ ತೀರ್ಪು ಹೋಗಿ ಬಿಡುತ್ತದೆ ಅಂದರೆ ಯಾವುದೇ ಆತಂಕಕ್ಕೆ ಅವಕಾಶ ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ನಾಲ್ಕು ಜನ ಮುಖ್ಯಮಂತ್ರಿಗಳ ಸಮಿತಿ ಏನು ಇದೆ ಇದು ಸಂಯುಕ್ತ ರಂಗ ಸರ್ಕಾರ ಉಳಿಸತಕ್ಕಂಥ ಸಮಿತಿ, ಸಂಯುಕ್ತ ರಂಗದಿಂದ ರಚನೆಯಾದಂಥ ಸಮಿತಿ.

ಶ್ರೀ ಸಿದ್ಧರಾಮಯ್ಯ : ನಾಳೆ ಬೆಳಿಗ್ಗೆ ಮುಖ್ಯಮಂತ್ರಿಗಳು ಬರುತ್ತಾರೆ ಇದರ ಬಗ್ಗೆ ವಿವರವಾದ ಹೇಳಿಕೆಯನ್ನು ಕೊಡುತ್ತಾರೆ, ಆದ್ದರಿಂದ ದಯಮಾಡಿ ಬೇಡಿಕೆಗಳ ಮೇಲೆ ಚರ್ಚೆ ನಡೆಯಲಿ. ಮುಖ್ಯಮಂತ್ರಿಗಳು ನಾಳೆ ಬೆಳಿಗ್ಗೆ ಬಂದು ಸಂಪೂರ್ಣವಾದ ವಿವರವನ್ನು ಕೊಡುತ್ತಾರೆ. ನಮಗೆ ಏನು ಮಾಡಬೇಕೆಂಬ ಜವಾಬ್ದಾರಿ ಗೊತ್ತಿದೆ.

6.00 ಪಿ.ಎಂ.

ಈ ರಾಜ್ಯದ ಹಿತದೃಷ್ಟಿಯಿಂದ ಯಾವ ಕೆಲಸಗಳನ್ನು ಜವಾಬ್ದಾರಿಯಿಂದ ಮಾಡಬೇಕು ಎಂಬುದರ ಬಗ್ಗೆ ನನಗೆ ಗೊತ್ತಿದೆ. ಆ ಜವಾಬ್ದಾರಿ ನನಗೆ ಗೊತ್ತಿರುವುದರಿಂದಲೇ ಇಲ್ಲಿ ಕುಳಿತಿರುವುದು. ಮಾನ್ಯ ಅಧ್ಯಕ್ಷರೇ, ನಾಳೆ ಬೆಳಿಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಇಲ್ಲಿಗೆ ಬಂದು ಇದರ ಬಗ್ಗೆ ವಿವರವಾದಂಥ ಹೇಳಿಕೆಯನ್ನು ಕೊಡುತ್ತಾರೆ. ಪದೇ ಪದೇ ಇದರ ಬಗ್ಗೆ ಚರ್ಚೆ ಮಾಡಿ ಕಾಲವನ್ನು ಕಳೆಯತಕ್ಕಂಥದ್ದು ಅಗತ್ಯವಿಲ್ಲ. ಮಾನ್ಯ ಸದಸ್ಯರು ಈಗ ಬೇಡಿಕೆಗಳ ಮೇಲೆ ಚರ್ಚೆಯನ್ನು ಮಾಡಬೇಕು. ಈ ವಿಷಯದ ಬಗ್ಗೆ ಸಂಪೂರ್ಣವಾದಂಥ ವಿವರನ್ನೊಳಗೊಂಡ ಹೇಳಿಕೆಯನ್ನು ನಾಳೆ ಬೆಳಿಗ್ಗೆ ಮಾನ್ಯ ಮುಖ್ಯಮಂತ್ರಿಗಳು ಕೊಡುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಈಗ ರಚನೆಯಾಗಿರುವ ಕಮಿಟಿ 'ಯು.ಡಿ.ಎಫ್, ಪ್ರೊಟೆಕ್ಷನ್ ಎಕ್ಸ್‌ಪರ್ಟ್ಸ್ ಕಮಿಟಿ' ರೀತಿಯಲ್ಲಿ ಆಗುತ್ತದೆ. ಈ ಕಮಿಟಿ ಯು.ಡಿ.ಎಫ್.ಗೆ ರಕ್ಷಣೆ ಮಾಡತಕ್ಕಂಥ ಸಮಿತಿಯೇ ಹೊರತಾಗಿ ಈ ಒಂದು ರಾಜ್ಯಕ್ಕೆ ನೀರು ಕೊಡತಕ್ಕಂಥ ಸಮಿತಿ ಇದಲ್ಲ. ಇದು ಸರಿಯಲ್ಲ.

ಶ್ರೀ ಸಿದ್ಧರಾಮಯ್ಯ : ಅಧ್ಯಕ್ಷರೇ, ಇದರಲ್ಲಿ ರಾಜಕಾರಣ ಮಾಡಬೇಕು, ಪ್ರಚಾರ ಮಾಡಬೇಕು ಮತ್ತು ಜನರಿಗೆ ತಪ್ಪು ತಿಳುವಳಿಕೆಯನ್ನು ಈ ಮೂಲಕ ಕೊಡಬೇಕು ಎಂದು ನೀವು ಮಾಡುವುದೇ ಆದರೆ ಅದನ್ನೇಕೆ ನೀವು ಮಾಡಿ, ನಾವೇನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ರಾಜಕಾರಣ ನೀವು ಮಾಡುವುದಕ್ಕೋಸ್ಕರವೇ ತಾನೇ ತಾವು ಈಗ ಈ ಕಮಿಟಿ ಮಾಡಿರುವುದು. ರಾಜಕಾರಣದ ಮೇಲೆ ಕಮಿಟಿಯನ್ನು ಮಾಡಿದವರು ನೀವು. ರಾಜಕಾರಣ ಮಾಡಿದವರು ನೀವು.

ಶ್ರೀ ಸಿದ್ಧರಾಮಯ್ಯ : ನಮ್ಮ ಸ್ಟ್ಯಾಂಡ್ ಕ್ಲಿಯರ್ ಆಗಿದೆ ಇದರ ಬಗ್ಗೆ ನಮ್ಮ ಮುಖ್ಯಮಂತ್ರಿಗಳು ಸ್ಪಷ್ಟವಾಗಿ ಹೇಳಿದ್ದಾರೆ. ನಾವು ಬಚಾವತ್ ಅವಾರ್ಡ್ ತೀರ್ಪಿಗೆ ವಿರುದ್ಧವಾಗಿ ಹೋಗುವುದಿಲ್ಲ. ಇದು ಬೈಂಡಿಂಗ್ ಆದಕಾರಣ ಅದನ್ನು ಬಿಟ್ಟು ನಾವು ಹೊರಗೆ ಹೋಗುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೇ, ಇವರು ಬೈಂಡಿಂಗ್, ಬೈಂಡಿಂಗ್ ಎಂದು ಹೇಳುತ್ತಾರೆ. ಆದರೆ ಅಲ್ಲಿ ಮಾನ್ಯ ಮುಖ್ಯಮಂತ್ರಿಗಳು ಐ ಆಮ್ ಲೀವಿಂಗ್, ಲೀವಿಂಗ್ ಎಂದು ಹೇಳುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಈ ಸಮಿತಿಯನ್ನು ರಚನೆ ಮಾಡದಿದ್ದರೆ ಸರ್ಕಾರವೇ ಹೊರಟು ಹೋಗುತ್ತಿತ್ತು. ಕೇಂದ್ರ ಸರ್ಕಾರ ಕೆಳಗೆ ಬೀಳುತ್ತಿತ್ತು. ಆದಕ್ಕೋಸ್ಕರವಾಗಿ ಈ ಸಮಿತಿಯ ರಚನೆ ಅದಕ್ಕೋಸ್ಕರವೇ ಈ ಕರ್ನಾಟಕದ ಬಲಿ,

ಇದಕ್ಕೆ ನಾವು ಒಪ್ಪುವುದಿಲ್ಲ. ನಾವು ಇದನ್ನು ಒಪ್ಪುವುದಿಲ್ಲವಾದ ಕಾರಣ ಧರಣಿಯನ್ನು ಮಾಡುತ್ತೇವೆ.

(ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಸದನದ ಬಾವಿಯಲ್ಲಿ ಧರಣಿ ಕುಳಿತರು)

ಶ್ರೀ ಸಿದ್ಧರಾಮಯ್ಯ : ಮಾನ್ಯ ಅಧ್ಯಕ್ಷರೇ, ಇದರಲ್ಲಿ ಇವರು ತಮ್ಮ ಬೇಳೆಕಾಳನ್ನು ಬೇಯಿಸಿ ಕೊಳ್ಳುವುದಕ್ಕೆ ಹೋಗುತ್ತಾರೆ. ಇವರಿಗೆ ಬೇಡಿಕೆಗಳ ಮೇಲೆ ಚರ್ಚೆ ಮಾಡುವುದಕ್ಕೆ ಇಷ್ಟವಿಲ್ಲ. ನಾಳೆ ಮುಖ್ಯಮಂತ್ರಿಗಳು ಬಂದ ಮೇಲೆ ಇಲ್ಲಿ ಹೇಳಿಕೆಯನ್ನು ಕೊಡುತ್ತಾರೆ ಎಂದು ಈಗಾಗಲೇ ಹೇಳಿ ಪದೇ ಪದೇ ನಮ್ಮ ನಿಲುವಿನ ಬಗ್ಗೆ ಸ್ಪಷ್ಟವಾಗಿ ಹೇಳುತ್ತಲೇ ಇದ್ದೇನೆ. ನಾನು ಈಗಾಗಲೇ ಕ್ಲಿಯರ್ ಆಗಿ ಹೇಳಿರುವಂತೆ ನಮ್ಮ ನಿಲುವಿನಲ್ಲಿ ಯಾವುದೇ ಬದಲಾವಣೆಯೂ ಇಲ್ಲ. ಅವರು ಕಮಿಟಿಯನ್ನು ಮಾಡಿದ ತಕ್ಷಣ ರಾತ್ರಿಯಲ್ಲಿಯೇ ಎಲ್ಲಾ ಹೊರಟುಹೋಗಿ ಬಿಟ್ಟಿತು ಎನ್ನುವ ರೀತಿಯಲ್ಲಿ ರಾಜಕಾರಣದ ಮಾತುಗಳನ್ನು ಅವರು ಅಂದರೆ ನಾವೂ ಕೂಡ ರಾಜಕೀಯದ ಮಾತುಗಳನ್ನು ಆಡಬೇಕಾಗುತ್ತದೆ. ನಾವು ಇದುವರೆಗೆ ರಾಜ್ಯದ ಹಿತವನ್ನು ಕಾಪಾಡುವುದಕ್ಕೋಸ್ಕರ ಸದುದ್ದೇಶದಿಂದ ಮಾತನಾಡುತ್ತಿದ್ದೆವು. ನೀವು ಕೂಡ ರಾಜ್ಯದ ಹಿತವನ್ನು ಕಾಪಾಡುವ ದೃಷ್ಟಿಯಿಂದ ಮತ್ತು ನಾವೂ ಕೂಡ ರಾಜ್ಯದ ಹಿತವನ್ನು ಕಾಪಾಡುವ ದೃಷ್ಟಿಯಿಂದ ಮಾತನಾಡುತ್ತಿದ್ದೇವೆ. ನಾವು ಕೆಲಸ ನಿಲ್ಲಿಸುತ್ತೇವೆ ಎನ್ನುವ ಮಾತನ್ನು ಹೇಳಿದ್ದೇವೆಯೇ?

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ಈ ಹಿಂದೆಯೂ ಇದೇ ರೀತಿ ಆಗಿತ್ತು. ಬೆಳಿಗ್ಗೆ ಕಾವೇರಿ ಜಲಾಶಯದ ಕನ್ನಂಬಾಡಿಯಲ್ಲಿ ನೀರು ಇಲ್ಲ ಎಂದು ಹೇಳಿ ಸಾಯಂಕಾಲ ನೀರನ್ನು ಬಿಟ್ಟರು. ಮಾನ್ಯ ಮುಖ್ಯಮಂತ್ರಿಗಳು ಬೆಳಿಗ್ಗೆ ಒಂದನ್ನು ಹೇಳಿ ಸಾಯಂಕಾಲ ಒಂದನ್ನು ಹೇಳಿದರು. ಆದ್ದರಿಂದ ಎಕ್ಸ್‌ಪರ್ಟ್ಸ್ ಕಮಿಟಿಯವರನ್ನು ಇಲ್ಲಿಗೆ ಬರುವುದಕ್ಕೆ ಬಿಡುವುದಿಲ್ಲ ಎಂದು ನೀವು ಹೇಳಬೇಕು. ಆ ರೀತಿಯಲ್ಲಿ ಹೇಳದಿದ್ದರೆ ನೀವು ಈ ರಾಜ್ಯದ ಜನತೆಗೆ ದ್ರೋಹ ಮಾಡಿದ ರೀತಿ ಆಗುತ್ತದೆಂದು ಹೇಳಿ ನಾವೂ ಕೂಡ ಧರಣಿಯನ್ನು ಮಾಡುತ್ತೇವೆ.

(ಮಾನ್ಯ ಯಡಿಯೂರಪ್ಪನವರು ಧರಣಿಗೆ ಬಂದು ಮಾತನಾಡುತ್ತಿರುವಾಗಲೇ ಎಲ್ಲಾ ಬಿ.ಜೆ.ಪಿ. ಸದಸ್ಯರುಗಳು ಸದನದ ಬಾವಿಗೆ ಬಂದು ಧರಣಿಯಲ್ಲಿ ಪಾಲ್ಗೊಂಡರು. ಶ್ರೀಮತಿ ಪ್ರಮೀಳಾ ನೇಸರ್ಗಿಯವರು ತಮ್ಮ ಸ್ವಸ್ಥಾನದಲ್ಲೇ ಇದ್ದರು)

ಶ್ರೀ ಸಿದ್ಧರಾಮಯ್ಯ : ಈ ವಿಷಯದ ಬಗ್ಗೆ ವಿಚಾರ ಮಾಡುವುದಕ್ಕೆ ಮುಖ್ಯಮಂತ್ರಿಗಳು ಅಲ್ಲಿಗೆ ಹೋಗಿದ್ದಾರೆ. ಇಲ್ಲಿ ನಾನು ಉತ್ತರ ಕೊಡುವುದಕ್ಕೆ ಇದ್ದೇನೆ. ನನ್ನನ್ನು ಕೇಳಿ, ಅದನ್ನು ಬಿಟ್ಟು ಅವರು ಏಕೆ ಹೊರಟು ಹೋಗಿದ್ದಾರೆ, ಇವರು ಏಕೆ ಹೊರಟುಹೋಗಿದ್ದಾರೆ ಎಂದು ಕೇಳಿದರೆ... ಬಿಸಿನೆಸ್ ನಡೆಸುವ ಅಧ್ಯಕ್ಷರು ಇಲ್ಲಿ ಇರುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ರಾಜ್ಯದ ಹಿತಕ್ಕೆ ಈಗ ಅನ್ಯಾಯವಾಗುತ್ತಿದೆ.

ಶ್ರೀ ಸಿದ್ಧರಾಮಯ್ಯ : ಓಹೋಹೋ ಅನ್ಯಾಯವಾಗುತ್ತಿದೆ. ಈ ರೀತಿಯ ರಾಜಕೀಯ ಬೇಡ. ಈ ಸರ್ಕಾರ ರಾಜ್ಯದ ಹಿತಕ್ಕೆ ಅನ್ಯಾಯ ಆಗುವುದಕ್ಕೆ

ಬಿಡುವುದಿಲ್ಲ. ಯಾವುದೇ ಕಾರಣಕ್ಕೂ ಅನ್ಯಾಯ ಆಗುವುದಕ್ಕೆ ಬಿಡುವುದಿಲ್ಲ. ಇದರಲ್ಲಿ ಮೋಸ ಎಂದು ನೀವು ಮಾತ್ರ ಹೇಳುತ್ತಿರುವುದು. ನೀವು ಜನರಿಗೆ ಈ ರೀತಿ ಹೇಳಿದರೆ ಜನರು ನಿಮ್ಮ ಮಾತನ್ನು ಕೇಳಬೇಕಲ್ಲ?

ಶ್ರೀ ಸಿ. ಭೈರೇಗೌಡ : ಏನು ಇವರುಗಳೇ ಕರ್ನಾಟಕ ರಾಜ್ಯದ ಹಿತವನ್ನು ಕಾಪಾಡುವುದಕ್ಕೆ ಇರತಕ್ಕಂಥದ್ದು, ಇನ್ನು ಯಾರೂ ಇಲ್ಲ ಇಲ್ಲಿ ಅಲ್ಲವೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೇ, ಇದು ಎಕ್ಸ್‌ಪರ್ಟ್ಸ್ ಕಮಿಟಿ ಅಲ್ಲ, ಪೊಲಿಟಿಕಲ್ ಕಮಿಟಿ, ಅಂದರೆ ಯು.ಡಿ.ಎಫ್. ಎಕ್ಸ್‌ಪರ್ಟ್ಸ್ ಪ್ರೊಟೆಕ್ಷನ್ ಕಮಿಟಿ. ಆ ಕಾರಣಕ್ಕಾಗಿ ನಾವೂ ಕೂಡ ಧರಣಿಯನ್ನು ಮಾಡುತ್ತೇವೆ.

(ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆಯವರಾದಿಯಾಗಿ ಕಾಂಗ್ರೆಸ್ ಸದಸ್ಯರೆಲ್ಲರೂ ಸದನದ ಬಾವಿಯಲ್ಲಿ ಧರಣಿ ಕುಳಿತುಕೊಂಡರು)

ಶ್ರೀ ಯು.ಆರ್. ಸಭಾಪತಿ : ಮಾನ್ಯ ಅಧ್ಯಕ್ಷರೇ, ನೀವು ಮಾಡಿರುವಂಥ ಸಮಿತಿಯನ್ನು ನಾವು ಬಹಿಷ್ಕರಿಸಬೇಕಾಗಿದೆ. ನೀವು ಕರ್ನಾಟಕದ ಜನತೆಯನ್ನು ಮತ್ತು ರಾಜ್ಯದ ಹಿತಾಸಕ್ತಿಯನ್ನು ಬಲಿ ಕೊಡುತ್ತಿದ್ದೀರಿ. ಕರ್ನಾಟಕ ರಾಜ್ಯದ ಹಿತಸಾಕ್ತಿಯನ್ನು ಮಾರಿಕೊಳ್ಳುತ್ತಿದ್ದೀರಿ ಅದಕ್ಕಾಗಿ ನಾವೂ ಕೂಡ ಇದನ್ನು ಪ್ರತಿಭಟಿಸಿ ಧರಣಿಯನ್ನು ಮಾಡುತ್ತೇವೆ.

(ಮಾನ್ಯ ಸಭಾಪತಿಯವರು ಸದನದ ಬಾವಿಗೆ ಬಂದು ಧರಣಿ ಕುಳಿತರು)

ಶ್ರೀ ಸಿದ್ಧರಾಮಯ್ಯ : ಈ ರೀತಿ ಮಾಡಿಬಿಟ್ಟರೆ ನಿಮ್ಮ ಬೇಳೆಕಾಳು ಏನೂ ಬೇಯುವುದಿಲ್ಲ. ಈ ರಾಜ್ಯದ ಜನತೆಗೆ ರಾಜ್ಯದ ಹಿತವನ್ನು ಯಾರು ಹೇಗೆ ಕಾಪಾಡುತ್ತಾರೆ ಎನ್ನುವ ವಿಷಯ ಗೊತ್ತಿದೆ. ನೀವು ಬೇಕಾದರೆ ಹೋಗಿ, ಹೇಳೋಗಿ, ಈ ರೀತಿಯಲ್ಲಿ ಸದನದ ಕಲಾಪ ನಡೆಯದ ಹಾಗೆ ನೀವು ಮಾಡಬಾರದು. ನಾನು ಈಗಾಗಲೇ ಬಹಳ ಸ್ಪಷ್ಟವಾಗಿ ಹೇಳಿದ್ದೇನೆ, ನಾಳೆ ಮಾನ್ಯ ಮುಖ್ಯಮಂತ್ರಿಗಳು ಬಂದು ಇದರ ಬಗ್ಗೆ ಹೇಳಿಕೆಯನ್ನು ಕೊಡುತ್ತಾರೆಂದೂ ಹೇಳಿದ್ದೇನೆ.

(ಗೊಂದಲ)

ಶ್ರೀಮತಿ ಪ್ರಮೀಳಾ ನೇಸರ್ಗಿ : ಮಾನ್ಯ ಅಧ್ಯಕ್ಷರೇ, ಇದೇ ವಿಷಯದ ಬಗ್ಗೆ ನಾನು ಹೇಳುವುದೇನೆಂದರೆ ಇವೊತ್ತು ಬೆಳಿಗ್ಗೆ ಆ ಭಾಗದಿಂದ ಬಂದಂಥ ಜನರು ಹೈಕೋರ್ಟ್‌ನಲ್ಲಿ ರಿಟ್ ಹಾಕಿದ್ದಾರೆ. ಇವೊತ್ತು ರೈತರಿಗೆ ನೀರನ್ನು ಬಿಡುವುದಿಲ್ಲವೆಂದು ಆರ್ಡರ್ ಮಾಡಿದ್ದಾರೆ. ಆಂಧ್ರಪ್ರದೇಶಕ್ಕೆ ನೀರು ಬಿಡುತ್ತೇವೆ ಎಂದು ಹೇಳಿ ನೀರನ್ನು ಕೊಟ್ಟಿಲ್ಲ. ಇದರ ಬಗ್ಗೆ ಕೋರ್ಟ್‌ನಲ್ಲಿ ಈಗಾಗಲೇ ನೋಟಿಸ್ ಇಶ್ಯೂ ಮಾಡಿ ಆರ್ಡರ್ ಮಾಡಿದ್ದಾರೆ. 1992ನೇ ಇಸವಿಯಿಂದ 1998ನೇ ಇಸವಿಯವರೆಗೆ ನೀರು ಬಿಡುತ್ತೇವೆ ಎಂದು ಹೇಳಿ ನೋಟಿಸ್ ಕೊಟ್ಟು ರೈತರಿಗೆ ಆದೇಶ ಕೊಟ್ಟನಂತರ ನಿಮ್ಮ ಅಧಿಕಾರಿಗಳು ಆಂಧ್ರಪ್ರದೇಶಕ್ಕೆ ನೀರು ಬಿಡಬೇಕು ಎಂದು ಹೇಳಿ ಇವೊತ್ತು ನೀರು ಬಿಡುವುದನ್ನು ನಿಲ್ಲಿಸಿದ್ದಾರೆ. ರೈತರಿಗೆ ನೀರನ್ನು ಕೊಡುತ್ತಿಲ್ಲ. ಇದರ ಬಗ್ಗೆ ಈಗಾಗಲೇ ಹೈಕೋರ್ಟ್‌ನಲ್ಲಿ ರಿಟ್ ಹಾಕಿದ್ದಾರೆ.

ಆಂಧ್ರಕ್ಕೆ ನೀರು ಬಿಡಬೇಕೆಂದು ಹೇಳಿ ಕಾರಣವನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ಸ್ಪಷ್ಟವಾಗಿ ಹೇಳಿ. ಆಂಧ್ರಕ್ಕೆ ನೀರನ್ನು ಬಿಡಬೇಕು ಅದಕ್ಕೋಸ್ಕರ ರೈತರು ನೀರನ್ನು ಉಪಯೋಗಿಸಬಾರದು ಎಂದು ಹೇಳಿ ನೀರನ್ನು ನಿಲ್ಲಿಸಿದ್ದಾರೆ. ಇದು ಬಹಳ ಮುಖ್ಯವಾದ ವಿಚಾರ. ನಿಜವಾಗಿಯೂ ಕೂಡ ಎಕ್ಸ್‌ಟ್ರಾ ಕಾನ್ಸ್‌ಟ್ಯೂಶನ್‌ನಲ್ಲೂ ಬಚಾವತ್ ಅವಾರ್ಡ್ ಇರಬೇಕಾದರೆ ಕಾನ್ಸ್ಟಿಟ್ಯೂಶನ್‌ನಲ್ಲಿ ಎಕ್ಸ್‌ಟ್ರಾ ಕಾನ್ಸ್‌ಟಿಟ್ಯೂಶನ್ ಮಾಡಿರತಕ್ಕಂಥದ್ದು ಇದರ ಬಗ್ಗೆ ಸನ್ಮಾನ್ಯ ಮೊಯ್ಲಿಯವರು ಏನು ಹೇಳಿದ್ದಾರಲ್ಲಾ ಅದು ಅಕ್ಷರಶಃ ಸತ್ಯ, ಅವರಿಗೆ ಅಧಿಕಾರ ಇಲ್ಲ, ಈ ಕಮಿಟಿಗೆ ಅಧಿಕಾರ ಇಲ್ಲ. ಆದ್ದರಿಂದ ಈ ಕಮಿಟಿಯವರು ಇಲ್ಲಿಗೆ ಬಂದು ಆಲಮಟ್ಟಿಯನ್ನು ನೋಡುವುದಕ್ಕೆ ಅಧಿಕಾರವಿಲ್ಲ, ಆದ್ದರಿಂದ ಸನ್ಮಾನ್ಯ ಉಪ ಮುಖ್ಯಮಂತ್ರಿಗಳು ತಕ್ಷಣ ಇದರ ಬಗ್ಗೆ ಹೇಳಿಕೆಯನ್ನು ಕೊಡಬೇಕು. ನಾವು ಆ ಕಮಿಟಿಯವರನ್ನು ಇಲ್ಲಿಗೆ ಬರುವುದಕ್ಕೆ ಬಿಡುವುದಿಲ್ಲ ಎಂದು ಹೇಳಿ ಮಾನ್ಯ ಉಪ ಮುಖ್ಯಮಂತ್ರಿಗಳು ಆದೇಶವನ್ನು ಕೊಡಬೇಕು. ಇಲ್ಲದಿದ್ದರೆ ತಾವು ರಾಜೀನಾಮೆಯನ್ನು ತಕ್ಷಣ ಕೊಡಬೇಕು ಅಥವಾ ಆ ಕಮಿಟಿಯವರನ್ನು ಇಲ್ಲಿಗೆ ಬಂದು ವೀಕ್ಷಣೆ ಮಾಡುವುದಕ್ಕೆ ನಾವು ಬಿಡುವುದಿಲ್ಲ ಎಂದು ಹೇಳಬೇಕು. ರಾಜೀನಾಮೆಯನ್ನು ಕೊಡತಕ್ಕಂಥ ಕೆಲಸ ಮಾಡದಿದ್ದರೆ ದೇಶ ಉಳಿಯುವುದಿಲ್ಲ, ಈ ರಾಜ್ಯ ಉಳಿಯುವುದಿಲ್ಲ.

ಶ್ರೀ ಸಿದ್ಧರಾಮಯ್ಯ : ರಾಜ್ಯದ ಹಿತ ಬೇಕಾಗಿಲ್ಲ ನಿಮಗೆ ಎಂದು ಹೇಳಿ, ನೀವೇ ರಾಜೀನಾಮೆ ಕೊಡಬೇಕಾದ ಪರಿಸ್ಥಿತಿ ನಿರ್ಮಾಣವಾಗುತ್ತಿದೆ ಈಗ ಹುಷಾರಾಗಿರಿ, ರಾಜೀನಾಮೆ ಕೊಡಬೇಕಾಗುತ್ತದೆ. ಏಕೆಂದರೆ ವಿರೋಧ ಪಕ್ಷದವರಾಗಿ ನೀವು ಸರಿಯಾಗಿ ಕೆಲಸ ಮಾಡುತ್ತಿಲ್ಲವೆಂದು ರಾಜೀನಾಮೆ ಕೊಡಬೇಕಾಗುತ್ತದೆ.

ಅಧ್ಯಕ್ಷರು : ಕಳೆದ ಒಂದು ಗಂಟೆಯ ಅವಧಿಯಲ್ಲಿ ಇಲ್ಲಿ ನಡೆದ ಎಲ್ಲಾ ವಾದ ವಿವಾದಗಳನ್ನು ನಾನು ಕೇಳಿದ್ದೇನೆ. ರಾಜ್ಯದ ಹಿತಾಸಕ್ತಿಗೆ ಸಂಬಂಧಿಸಿದ ವಿಚಾರ ಸಂಧಿಗ್ಧ ಸ್ಥಿತಿಗೆ ಬಂದಿದೆ, ಆ ನಿಟ್ಟಿನಲ್ಲಿ ಈ ರೀತಿಯ ವಾತಾವರಣ ಬರತಕ್ಕಂಥದ್ದು ಸಹಜ, ನಾನು ಇದಕ್ಕೆ ಬೇಸರ ಮಾಡಿ ಕೊಳ್ಳುವುದಿಲ್ಲ.

ಈ ವಿಷಯಕ್ಕೆ ಸಂಬಂಧಪಟ್ಟ ಹಾಗೆ ಈಗಾಗಲೇ ಸನ್ಮಾನ್ಯ ಉಪ ಮುಖ್ಯಮಂತ್ರಿಗಳು ಉತ್ತರವನ್ನೇನೋ ಕೊಟ್ಟಿದ್ದಾರೆ. ಆದರೆ ನೀವು ಇಷ್ಟು ಹೊತ್ತು ಉಲ್ಲೇಖ ಮಾಡಿರುವಂಥ ಎಲ್ಲಾ ಹೇಳಿಕೆಗಳೂ ಕೂಡ ಮುಖ್ಯಮಂತ್ರಿಗಳ ಹೆಸರಿನಲ್ಲಿ ಬಂದಿರುವಂಥವುಗಳು. ಅವರು ಈಗ ಸದನದಲ್ಲಿ ಇಲ್ಲದೇ ದೆಹಲಿಯಲ್ಲಿರುವುದರಿಂದ ಮಾನ್ಯ ಉಪ ಮುಖ್ಯಮಂತ್ರಿಗಳು ಕೊಟ್ಟ ಉತ್ತರದಿಂದ ನಿಮಗ್ಯಾರಿಗೂ ಸಮಾಧಾನವಾಗಿಲ್ಲ, ನನಗೆ ಈ ಸಂದರ್ಭದಲ್ಲಿ ಮುಖ್ಯಮಂತ್ರಿಗಳ ಗೈರು ಹಾಜರಿಯಲ್ಲಿ ನೀವು ಆ ವಿಚಾರಕ್ಕಾಗಿ ಪಟ್ಟು ಹಿಡಿದಿರುವಾಗ ನಾನು ಕಲಾಪ ನಡೆಸಿಕೊಂಡು ಹೋಗುವುದು ಸಾಧುವಲ್ಲ ಮತ್ತು ಸಾಧ್ಯವೂ ಇಲ್ಲ. ಅದು ಅಷ್ಟು ಚೆನ್ನಾಗಿಯೂ ಇರುವುದಿಲ್ಲ ಮತ್ತು ಇದನ್ನು ನೋಡತಕ್ಕಂಥವರ ದೃಷ್ಟಿಯಲ್ಲೂ ಕೂಡ ಚೆನ್ನಾಗಿರುವುದಿಲ್ಲ. • ಒಂದು ವೇಳೆ ಮಾನ್ಯ ಮುಖ್ಯಮಂತ್ರಿಗಳು ಇಂದೇ ರಾತ್ರಿ ಬಂದರೆ ಬೆಳಿಗ್ಗೆ 9-30ಕ್ಕೆ ಸದನದ ಸಭೆಯನ್ನು ಇಟ್ಟುಕೊಳ್ಳಬಹುದು.

ಒಂದು ವೇಳೆ ಅವರು ಬೆಳಿಗ್ಗೆ ಹೊರಟು ಬಂದರೂ ಕೂಡ ಯಾವುದೇ ಕಾರಣಕ್ಕೂ ಬೆಳಿಗ್ಗೆ 10 ಗಂಟೆಗೆ ಮುಂಚೆ ಇಲ್ಲಿಗೆ ಬರುವುದಕ್ಕಾಗುವುದಿಲ್ಲ. ಆದುದರಿಂದ

ಸದನಕ್ಕೆ ಸನ್ಮಾನ್ಯ ಮುಖ್ಯಮಂತ್ರಿಗಳು ಬರಲಿ, ಅವರು ಇಲ್ಲಿಗೆ ಬಂದು ಏನು ಹೇಳುತ್ತಾರೋ ಅದರ ಮೇಲೆ ತಾವು ಒಂದು ನಿರ್ಣಯವನ್ನು ತೆಗೆದುಕೊಳ್ಳಿ.

ಈಗ ಸಭೆಯು ಮುಕ್ತಾಯವಾಗಿ ನಾಳೆ ಬೆಳಿಗ್ಗೆ 11 ಗಂಟೆಗೆ ಸೇರುವುದು.

(ಸದನವು ಸಂಜೆ 6 ಗಂಟೆ 10 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 13ನೇ ಆಗಸ್ಟ್ ಮಾಹೆ 1996ರ ಮಂಗಳವಾರದಂದು ಬೆಳಿಗ್ಗೆ 11 ಗಂಟೆಗೆ ಸೇರಲು ನಿಶ್ಚಯಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)